ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

೩ನೇ ವರ್ಷ ೭ನೇ ಸಂಚಿಕೆ ಕೊಪ್ಪ ೭-೧೦-೧೯೮೪ ಭಾನುವಾರ ಬೆಲೆ ೨೦ ಪೈಸೆ

ಹರಿಹರಪುರದಲ್ಲಿ ಯುವಜನ ಸೇವಾ ಶಿಬಿರ

ಹರಿಹರಪುರ: ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ಅ. ೭ರಿಂದ ೧೬ರವರೆಗೆ ಯುವಜನ ಸೇವಾ ಶಿಬಿರವೊಂದು ಇಲ್ಲಿನ ಎ.ಆರ್.ಎಸ್. ಕಿರಿಯ ಕಾಲೇಜಿನಲ್ಲಿ ಏರ್ಪಾಡಾಗಿದೆ.

ಶಿಬಿರದಲ್ಲಿ ವಿಚಾರ ಸಂಕಿರಣಗಳು ಮತ್ತು ಚರ್ಚಾಕೂಟಗಳು, ಉಪನ್ಯಾಸಗಳು ಹಾಗೂ ಪ್ರತಿದಿನ ರಾತ್ರಿ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತವೆ. ಅಲ್ಲದೆ ಕಿರಿಯ ಕಾಲೇಜಿನ ಆಟದ ಮೈದಾನದ ವಿಸ್ತರಣೆ, ಬೇಲಿ, ಗಿಡ ನೆಡುವುದು ಮುಂತಾದುವುಗಳ ಶ್ರಮದಾನ ನಡೆಯುತ್ತದೆ. ಅ. ೧೦ರಂದು ಸ್ತ್ರೀ ರೋಗ, ಚರ್ಮ ರೋಗ ಮತ್ತು ಹಲ್ಲುಗಳ ಪರೀಕ್ಷೆ, ಸಲಹೆ ಮತ್ತು ಚಿಕಿತ್ಸಾ ಶಿಬಿರ, ಅ. ೧೪ರಂದು ಮಕ್ಕಳ ಮತ್ತು ಮಹಿಳೆಯರ ಆರೋಗ್ಯ ಪರೀಕ್ಷೆ ಮತ್ತು ತ್ರಿರೋಗ ನಿರೋಧಕ (ಟ್ರಿಪಲ್-ಆ್ಯಂಟಿಜೆನ್) ಚುಚ್ಚುಮದ್ದಿನ ಶಿಬಿರ ನಡೆಯುತ್ತವೆ.

ಮನರಂಜನೆ ಕಾರ್ಯಕ್ರಮಗಳಲ್ಲಿ ಸಂಗೀತ ನಾಟಕ, ಚಲನಚಿತ್ರ ಮತ್ತು ಜಾನಪದ ಕಾರ್ಯಕ್ರಮಗಳಿದ್ದು, ಅ. ೧೧ರಂದು 'ವನ್ಯ ಜೀವಿಗಳು' ಎಂಬ ಚಲನಚಿತ್ರ, ಅ. ೧೩ರಂದು 'ಶಂಕರಾಚಾರ್ಯ' ಸಂಸ್ಕೃತ ಚಲನಚಿತ್ರ ಮತ್ತು ೧೪ರಂದು 'ಇಂಟಿಗೆ ಪಂಟಿಗೆ' ಕಾರ್ಯಕ್ರಮಗಳು ಗಮನಾರ್ಹವಾಗಿವೆ.

ಭದ್ರಾ ಮೇಲ್ದಂಡೆ ಯೋಜನೆ:
ಬರುವ ಸಮೃದ್ಧಿಗೆಂದು ಇರುವ ಸಮೃದ್ಧಿಯ ನಾಶ

ಜಿಲ್ಲೆಯ ಅರಣ್ಯಗಳಿಗೆ, ತೋಟ-ಗದ್ದೆ-ಖುಷ್ಕಿ ಭೂಮಿಗಳಿಗೆ ಮತ್ತು ಹವಾಮಾನಕ್ಕೆ ರಾವು ಬಡಿಸಲಿರುವ 'ಭದ್ರಾ ಮೇಲ್ದಂಡೆ ಯೋಜನೆ'ಯ ಸಿದ್ಧತೆ ಅಂತಿಮ ರೂಪ ಪಡೆಯುತ್ತಿರುವಂತೆ ಅದನ್ನು ವಿರೋಧಿಸುವ ಪ್ರಯತ್ನಗಳೂ ಅಲ್ಲಲ್ಲಿ ಚುರುಕುಗೊಳ್ಳುತ್ತಿವೆ. ಈ ಎಲ್ಲ ಪ್ರಯತ್ನಗಳನ್ನೂ ಒಗ್ಗೂಡಿಸಿ, ರೂಪುಕೊಟ್ಟು, ಪ್ರಚುರಪಡಿಸುವ ಕಾರ್ಯ ಈಗ ಆಗಬೇಕಿದೆ.

ನರಸಿಂಹರಾಜಪುರ ತಾಲ್ಲೂಕಿನ ಮಾಗುಂಡಿಯಲ್ಲಿ ಈ ಅಣೆಕಟ್ಟು ನಿರ್ಮಾಣವಾಗಲು ಸ್ಥಳ ಆಯ್ಕೆಯಾಗಿದ್ದು ಬೃಹತ್ ನೀರಾವರಿ ಇಲಾಖೆ ಒಂದು ಫಲಿತವನ್ನು ಹಾಕಿದೆ. ರಾಜ್ಯ ಸರ್ಕಾರದ ಮಂತ್ರಿ ಮಂಡಳ ಈಗಾಗಲೇ ಈ ಯೋಜನೆಯ ನಿರ್ಮಾಣವನ್ನು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಶಿಫಾರಸು ಮಾಡಿರುವುದಾಗಿ ತಿಳಿದು ಬಂದಿದೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಕೆಲವು ಭಾಗಗಳಿಗೆ ನೀರೊದಗಿಸಲು ಈ ಯೋಜನೆಯನ್ನು ಕೈಗೊಳ್ಳಲು ನಿರ್ಧರಿಸಲಾಗಿದೆ. ಜನತಾಪಕ್ಷದ ಹಿರಿಯ ನಾಯಕರಾದ ಎಸ್. ನಿಜಲಿಂಗಪ್ಪ ಮತ್ತು ಸಚಿವರಾದ ಬಿ.ಎಲ್.ಗೌಡ ಮುಂತಾದವರು ಈ ಯೋಜನೆ ಕಾರ್ಯಗತವಾಗುವ ಬಗ್ಗೆ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದಾರೆನ್ನಲಾಗಿದೆ.

ಮುಳುಗಡೆ, ಎಲ್ಲಾ ಮುಳುಗಡೆ!

ಜಿಲ್ಲೆಯ ಮಲೆನಾಡು ಭಾಗ ಬಹಳಷ್ಟು ಸಂಪದ್ಭರಿತವಾದದ್ದು. ಇಲ್ಲಿನ ಅರಣ್ಯಗಳೂ ಬಹು ಬೆಲೆಬಾಳುವ ಬೀಟೆ, ತೇಗ, ಹೊನ್ನೆ, ಮತ್ತಿ ಮುಂತಾದ ವೃಕ್ಷ ಸಂಪತ್ತಿನಿಂದ ಕೂಡಿದ್ದರೆ, ಪ್ರತಿ ವರ್ಷವೂ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಮರಮುಟ್ಟುಗಳನ್ನು ಉತ್ಪತ್ತಿ ಮಾಡುವ ಕಾಫೀ ತೋಟಗಳಲ್ಲಿ ಅಪಾರ ವಿದೇಶೀ ವಿನಿಮಯ ತರುವ ಕಾಫಿ, ಏಲಕ್ಕಿ, ಕಾಳು ಮೆಣಸು ಅಲ್ಲದೇ ವೀಳ್ಯದೆಲೆ, ಬಾಳೆ, ಕಿತ್ತಳೆ ಹಾಗೂ ಹಣ್ಣು ಹಂಪಲುಗಳು ಬೆಳೆಯುತ್ತವೆ. ಈ ಯೋಜನೆ–ಮುಳುಗಡೆ ಮತ್ತು ಪುನರ್ವಸತಿಯ ದೆಸೆಯಿಂದ ಇಂಥ ಸುಮಾರು ೨೫ ಸಾವಿರ ಎಕ್ರೆ ಅರಣ್ಯ, ಕಾಫೀ, ಏಲಕ್ಕಿ, ಕಾಳುಮೆಣಸಿನ ತೋಟಗಳು, ತರೀ ಭೂಮಿ, ಖುಷ್ಕಿಭೂಮಿ ಇತ್ಯಾದಿಗಳನ್ನು ನುಂಗಲಿದೆ.

ಲಕ್ಕವಳ್ಳಿಯಲ್ಲಿ ನಿರ್ಮಿತವಾದ ಭದ್ರಾ ಜಲಾಶಯದಿಂದಾಗಿ, ಕುದುರೆಮುಖ ಯೋಜನೆಗಾಗಿ ಹಾಗೂ ಕುದುರೆಮುಖ–ಕಾರ್ಕಳ ರಸ್ತೆ ಮತ್ತು ಕೆರೆಕಟ್ಟೆ ರಸ್ತೆಗಳ ನಿರ್ಮಾಣಕ್ಕಾಗಿ ನಮ್ಮ ಅರಣ್ಯಗಳು ಸಾಕಷ್ಟು ನಾಶವಾಗಿವೆ. ಈಗ ಉಳಿದಿರುವುದು ಭದ್ರಾ ಪಾತ್ರದ ಅರಣ್ಯಗಳು ಹಾಗೂ ಹೆಬ್ಬೆ-ಮುತ್ತೋಡಿ ಅರಣ್ಯಗಳು ಮಾತ್ರ. ಈ ಯೋಜನೆಯಿಂದ ಭದ್ರಾ ಪಾತ್ರದ ಅರಣ್ಯಗಳು ನಾಶವಾದರೆ, ನೀರಾವರಿ ಕಾಲುವೆಗಳಿಂದ ಹೆಬ್ಬೆ ಮುತ್ತೋಡಿ ಅರಣ್ಯಗಳಿಗೂ ಭದ್ರಾ ಅಭಯಾರಣ್ಯಕ್ಕೂ ಹಾನಿಯಾಗಲಿದೆ. **ಭದ್ರಾ ಪಾತ್ರದ ಭೂಮಿ ರೊಬಸ್ಟಾ ಕಾಫಿಗೆ ಪ್ರಪಂಚದಲ್ಲೇ ಉತ್ಕೃಷ್ಟವಾದದ್ದೆಂದು ಪರಿಗಣಿಸಲ್ಪಟ್ಟಿದೆ. ಅದೀಗ ಮುಳುಗಡೆಯಾಗಲಿದೆ.** ಈ ಯೋಜನೆಯಿಂದ ಕುದುರೆಮುಖ ಅದಿರು ಯೋಜನೆಗೆ ಧಕ್ಕೆಯಾಗುವುದರೊಂದಿಗೆ ಕುದುರೆಮುಖದಿಂದಾಗಿ ಅಣೆಕಟ್ಟೆಯಲ್ಲಿ ಹೂಳು ತುಂಬುವ ಸಂಭವವಿದೆ.

ಜೀವನಾಡಿಗೇ ಕುತ್ತು

ಇದೆಲ್ಲಕ್ಕಿಂತಲೂ ದೊಡ್ಡ ಹಾನಿ ಸಂಭವಿಸಲಿರುವುದು ನಮ್ಮ ಹವಾಮಾನಕ್ಕೆ. ಅರಣ್ಯ ನಾಶ ಮತ್ತು ಜಲಾಶಯದಿಂದ ಜಿಲ್ಲೆಯ ಮಳೆಯ ಕಾಲಮಾನಕ್ಕೆ ಧಕ್ಕೆ ಒದಗಲಿದೆ. ಮುಖ್ಯವಾಗಿ ಕಾಫಿ ತೋಟಗಳ ಜೀವನಾಡಿಯಾದ 'ಹೂ ಮಳೆ'ಗೆ ಧಕ್ಕೆಯಾದರೆ ಇಡೀ ಜಿಲ್ಲೆಯ ಕಾಫಿ ತೋಟಗಳು ಬರಡಾಗುವ ಭೀತಿಯಿದೆ. ಜೊತೆಗೆ ಹಾಲಿ ಇರುವ ಭದ್ರಾ ಅಣೆಕಟ್ಟು ಮತ್ತು ಅದರ ಅಚ್ಚುಕಟ್ಟುದಾರರಿಗೂ ತೊಂದರೆಯಾಗುವುದು.

ಭದ್ರಾಮೇಲ್ದಂಡೆ ನಿರ್ಮಾಣಕ್ಕೆ ಒತ್ತಾಸೆ ಮಾಡುತ್ತಿರುವ ರಾಜ್ಯದ ಸಚಿವರಾದ ಬಿ.ಎಲ್.ಗೌಡರನ್ನು ನಮ್ಮ 'ಜಿಲ್ಲಾ ಮಂತ್ರಿ'ಯಾಗಿ ನೇಮಿಸಿರುವುದು ಇನ್ನೊಂದು ವಿಪರ್ಯಾಸ (ಅಥವಾ ಅದೊಂದು ಉದ್ದೇಶಪೂರಿತ ಸಂಚೆ?) ಈ ಜಿಲ್ಲೆಯನ್ನು ಮುಳುಗಡೆ ಮಾಡುವ ಯೋಜನೆಗೆ ಕಾರಣರಾದವರನ್ನು ಜಿಲ್ಲಾ ಮಂತ್ರಿಯಾಗದಂತೆ ವಿರೋಧಿಸುವುದೂ ಈಗ ಜಿಲ್ಲೆಯ ಜನರ ಕರ್ತವ್ಯವಾಗಿದೆ.

ವಿನಾಶಕಾರಿ ಯೋಜನೆಗೆ ವಿರೋಧ

ಹಿಂದೆ ಕಳಸ ಹೋಬಳಿಯಲ್ಲಿ 'ಭದ್ರಾ ಮೇಲ್ದಂಡೆ ಯೋಜನೆ ವಿರೋಧಿ ಸಮಿತಿ'ಯೊಂದು ರಚಿತವಾಗಿತ್ತು. ಅದು ಈಗ ರಾಜಕೀಯ ಕಾರಣಗಳಿಗಾಗಿ ನಿಷ್ಕ್ರಿಯವಾಗಿದೆ. ಆದ್ದರಿಂದ ಈ ವಿನಾಶಕಾರಿ ಯೋಜನೆಯನ್ನು ತೀವ್ರವಾಗಿ ವಿರೋಧಿಸಲು ಈಗ ರಾಜಕೀಯದಿಂದ ಮುಕ್ತರಾದ ಜನರ ಸಂಘಟನೆ ಪ್ರಾರಂಭವಾಗಿದೆ. ಜಿಲ್ಲೆಯ ಮುಂಚೂಣಿಯ ಪತ್ರಕರ್ತರಾದ ಚಿಕ್ಕಮಗಳೂರಿನ ಗಿರಿಜಾಶಂಕರ್, ಚೂಡನಾಥ ಅಯ್ಯರ್, ಬಾಳೆಹೊನ್ನೂರಿನ ಬಿ. ಎಸ್. ವಿದ್ಯಾನಂದ ಭಟ್, ಜಿ. ಎಸ್. ಕೃಷ್ಣಮೂರ್ತಿ ಹಾಗೂ ಛಾಯಾಗ್ರಾಹಕ ಶಂಕರ

(೨ನೇ ಪುಟಕ್ಕೆ)

ನ.ರಾ.ಪುರ ಕಾಲೇಜಿನಲ್ಲಿ 'ಪ್ರತಿಭಾ ಪ್ರದರ್ಶನ'

ನ.ರಾ.ಪುರ: ಇಲ್ಲಿನ ಸ॥ ಕಿರಿಯ ಕಾಲೇಜಿನಲ್ಲಿ 'ಪ್ರತಿಭಾ ಪ್ರದರ್ಶನ' ಕಾರ್ಯಕ್ರಮ ಈಚೆಗೆ ಸಹಾಯಕ ಶಿಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಪ್ರಿನ್ಸಿಪಾಲರು ಬಹುಮಾನ ವಿತರಣೆ ಮಾಡಿದರು.

ಮುಖ್ಯ ಅತಿಥಿಗಳಾಗಿದ್ದ ಮಲೆನಾಡಿನ ಉದಯೋನ್ಮುಖ ಅಣಕು ಕಲಾವಿದ ಹೆಚ್. ವಿ. ನರಸಿಂಹ ಮೂರ್ತಿ ಹಾಸ್ಯದ ಪ್ರಕಾರಗಳನ್ನು ಉದಾಹರಣೆ ಸಹಿತ ವಿವರಿಸಿ, ಕೆಲವು ಅಣಕು ಪ್ರದರ್ಶನ ನೀಡಿ, ಸಭಿಕರನ್ನು ರಂಜಿಸಿದರು.

ಅಂದೇ ಅವರು ಇಲ್ಲಿನ ದೀಪ್ತಿ ಪ್ರೌಢಶಾಲೆಯಲ್ಲೂ ಒಂದು ಅಣಕು ಕಾರ್ಯಕ್ರಮ ನೀಡಿದರು.

ಕೊಪ್ಪ ಲಯನ್ಸ್ ಕ್ಲಬ್ ವತಿಯಿಂದ ಉಚಿತ ವೈದ್ಯಕೀಯ ಶಿಬಿರ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಮತ್ತು ಮದ್ರಾಸ್ ಪ್ರೆಸಿಡೆನ್ಸಿ ಲಯನ್ಸ್ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಗಾಂಧೀ ಜಯಂತಿಯಂದು ಉಚಿತ ವೈದ್ಯಕೀಯ ಶಿಬಿರ ನಡೆಯಿತು. ತಜ್ಞ ವೈದ್ಯರಾದ ಲ॥ ಡಾ॥ ಆರ್. ನಂಜುಂಡರಾವ್, ನೇತ್ರ ತಜ್ಞರಾದ ಲ॥ ಡಾ॥ ಆರ್. ಗೋಪಾಲ ಸ್ವಾಮಿ, ಮಹಿಳಾ ಮತ್ತು ಮಕ್ಕಳ ತಜ್ಞರಾದ ಲ॥ ಡಾ॥ ಸುಂದರವಲ್ಲಿ ಅವರುಗಳು ಭಾಗವಹಿಸಿ ನೇತ್ರ ಚಿಕಿತ್ಸೆ, ಮಹಿಳಾ ಮತ್ತು ಮಕ್ಕಳ ಆರೋಗ್ಯ ತಪಾಸಣೆ ಮತ್ತು ಸಾಮಾನ್ಯ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಗಳನ್ನು ನಡೆಸಿದರು.

ಸುಮಾರು ೨೩೦ ಜನ 'ರೋಗಿ'ಗಳು ಶಿಬಿರದಲ್ಲಿ ಭಾಗವಹಿಸಿದ್ದರು. ಲಯನ್ಸ್ ಕ್ಲಬ್ ವತಿಯಿಂದ ಔಷಧಿಗಳನ್ನು ಉಚಿತವಾಗಿ ಒದಗಿಸಲಾಯಿತು.

ಹುಲಿ ಹಾವಳಿ: "ನಮ್ಮ ಪಾಡು ಕೇಳಿ"

ಓದುಗರ ಪತ್ರ

ಮಾನ್ಯರೆ,

ಮೊನ್ನೆಯ 'ಮುಂಜಾವು' ನಲ್ಲಿ ಬೆಳವಿನ ಕೊಡಿಗೆ ಗ್ರಾಮದಲ್ಲಿ ಹುಲಿ ಹಾವಳಿ ಕುರಿತ ವರದಿ ಓದಿ ಸ್ವಲ್ಪ ನಗುವಂತಾಯಿತು. ಕಾರಣ ಇಷ್ಟೆ: ಅವರ ಊರಿಗೆ ಹುಲಿ ಬಂದು ೩ ತಿಂಗಳಾಯಿತಂತೆ, ಅಷ್ಟಕ್ಕೇ ಅವರು ಇಷ್ಟು ಹುಯಿಲೆಬ್ಬಿಸುವುದಾದರೆ ನಾವು ಈಗಾಗಲೇ ಆರೇಳು ವರ್ಷಗಳಿಂದ ಹುಲಿ ಹಿಂಡಿನ ಜೊತೆಯಲ್ಲೇ ಬದುಕುತ್ತಿರುವವರು ಇನ್ನೆಷ್ಟು ಗಲಾಟೆ ಮಾಡಬೇಕು ಅಂತ. ಇರಲಿ, ತಮಾಷೆ ಬೇಡ. ವಿಷಯಕ್ಕೆ ಬರೋಣ.

ನಮ್ಮೂರಿನ ಹುಲಿ ಕಾಟ 'ಮುಂಜಾವು' ನಲ್ಲಿ ಬೇಕಾದಷ್ಟು ವರದಿಯಾಗಿ ಅಲ್ಲಿಂದ ದಾಟಿ 'ಸುಧಾ' ವಾರಪತ್ರಿಕೆಯ ಅಗ್ರಲೇಖನವೂ ಆಯಿತು. ("ಕೊಟ್ಟಿಗೆಯಲ್ಲಿ ಹುಲಿ!"— ಸುಧಾ, ಜೂನ್ ೧೯೮೩.)

'ಮುಂಜಾವು'ನಲ್ಲಾಗಲೀ, ಸುಧಾದಲ್ಲಾಗಲಿ ಈ ಹಾವಳಿಗೆ ಕಾರಣವನ್ನೂ, ಅದರಿಂದ ನಾವುಗಳು ಪಡುತ್ತಿರುವ ಬವಣೆಯನ್ನೂ, ಅದರ ನಿವಾರಣೆಗೆ ಕನಿಷ್ಠ ಮಾಡಬಹುದಾದ ಪರಿಹಾರೋಪಾಯಗಳನ್ನೂ ವಿವರವಾಗಿ ಬರೆಯಲಾಗಿತ್ತು.

'ಮುಂಜಾವು'ನ ೧೯೮೩ರ ಜೂನ್ ತಿಂಗಳ ಸಂಚಿಕೆಯೊಂದರಲ್ಲಿ ಸಂಪಾದಕರು ಶಾಸಕ ಗೋವಿಂದ ಗೌಡರನ್ನು ಕುರಿತು ಬರೆದ ಬಹಿರಂಗ ಪತ್ರವಂತೂ ಜೀವ ಇರುವ ಮಾನವನೇ ಆದರೂ ಈ ಸಮಸ್ಯೆ ಬಗ್ಗೆ ತಕ್ಷಣ ಕಾರ್ಯಪ್ರವೃತ್ತನಾಗಬೇಕು—ಅಷ್ಟು ಪರಿಣಾಮಕಾರಿಯಾಗಿತ್ತು. ಅಷ್ಟು ಜೀವಂತ ಚಿತ್ರಣದಿಂದ ಕೂಡಿತ್ತು.

ಆದರೆ ಪರಿಣಾಮ ಆಯಿತೆ? ಶಾಸಕರು ಈ ಬಗ್ಗೆ ಕಾರ್ಯಪ್ರವೃತ್ತರಾಗುವುದಿರಲಿ, ಕಡೇ ಪಕ್ಷ ಅದನ್ನು ಓದಿರಬಹುದೇನೋ ಎಂದು ಅನುಮಾನ. ಅಂದರೆ, ...

(೨ನೇ ಪುಟಕ್ಕೆ)

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ — ೧೯

೩ನೇ ವರ್ಷ ೭ನೇ ಸಂಚಿಕೆ ಕೊಪ್ಪ ೭-೧೦-೧೯೮೪ ಭಾನುವಾರ ಬೆಲೆ ೨೦ ಪೈಸೆ

ಹರಿಹರಪುರದಲ್ಲಿ ಯುವಜನ ಸೇವಾ ಶಿಬಿರ

ಹರಿಹರಪುರ: ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ಅ. ೭ರಿಂದ ೧೬ರವರೆಗೆ ಯುವಜನ ಸೇವಾ ಶಿಬಿರವೊಂದು ಇಲ್ಲಿನ ಎ.ಆರ್.ಎಸ್. ಕಿರಿಯ ಕಾಲೇಜಿನಲ್ಲಿ ಏರ್ಪಾಡಾಗಿದೆ.

ಶಿಬಿರದಲ್ಲಿ ವಿಚಾರ ಸಂಕಿರಣಗಳು ಮತ್ತು ಚರ್ಚಾಕೂಟಗಳು, ಉಪನ್ಯಾಸಗಳು ಹಾಗೂ ಪ್ರತಿದಿನ ರಾತ್ರಿ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತವೆ. ಅಲ್ಲದೆ ಕಿರಿಯ ಕಾಲೇಜಿನ ಆಟದ ಮೈದಾನದ ವಿಸ್ತರಣೆ, ಬೇಲಿ, ಗಿಡ ನೆಡುವುದು ಮುಂತಾದುವುಗಳ ಶ್ರಮದಾನ ನಡೆಯುತ್ತದೆ. ಅ. ೧೦ರಂದು ಸ್ತ್ರೀ ರೋಗ, ಚರ್ಮ ರೋಗ ಮತ್ತು ಹಲ್ಲುಗಳ ಪರೀಕ್ಷೆ, ಸಲಹೆ ಮತ್ತು ಚಿಕಿತ್ಸಾ ಶಿಬಿರ, ಅ. ೧೪ರಂದು ಮಕ್ಕಳ ಮತ್ತು ಮಹಿಳೆಯರ ಆರೋಗ್ಯ ಪರೀಕ್ಷೆ ಮತ್ತು ತ್ರಿ-ರೋಗ ನಿರೋಧಕ (ಟ್ರಿಪಲ್-ಆ್ಯಂಟಿಜೆನ್) ಚುಚ್ಚುಮದ್ದಿನ ಶಿಬಿರ ನಡೆಯುತ್ತವೆ.

ಮನರಂಜನೆ ಕಾರ್ಯಕ್ರಮಗಳಲ್ಲಿ ಸಂಗೀತ ನಾಟಕ, ಚಲನಚಿತ್ರ ಮತ್ತು ಜಾನಪದ ಕಾರ್ಯಕ್ರಮಗಳಿದ್ದು, ಅ. ೧೧ರಂದು 'ವನ್ಯ ಜೀವಿಗಳು' ಎಂಬ ಚಲನಚಿತ್ರ, ಅ. ೧೨ರಂದು 'ಶಂಕರಾಚಾರ್ಯ' ಸಂಸ್ಕೃತ ಚಲನಚಿತ್ರ ಮತ್ತು ೧೪ರಂದು 'ಅಂಟಿಗೆ ಪಂಟಿಗೆ' ಕಾರ್ಯಕ್ರಮಗಳು ಗಮನಾರ್ಹವಾಗಿವೆ.

ಭದ್ರಾ ಮೇಲ್ದಂಡೆ ಯೋಜನೆ: ಬರುವ ಸಮೃದ್ಧಿಗೆಂದು ಇರುವ ಸಮೃದ್ಧಿಯ ನಾಶ

ಜಿಲ್ಲೆಯ ಅರಣ್ಯಗಳಿಗೆ, ತೋಟ-ಗದ್ದೆ-ಖುಷ್ಕಿ ಭೂಮಿಗಳಿಗೆ ಮತ್ತು ಹವಾಮಾನಕ್ಕೆ ರಾವು ಬಡಿಸಲಿರುವ 'ಭದ್ರಾ ಮೇಲ್ದಂಡೆ ಯೋಜನೆ'ಯ ಸಿದ್ಧತೆ ಅಂತಿಮ ರೂಪ ಪಡೆಯುತ್ತಿರುವಂತೆ ಅದನ್ನು ವಿರೋಧಿಸುವ ಪ್ರಯತ್ನಗಳೂ ಅಲ್ಲಲ್ಲಿ ಚುರುಕುಗೊಳ್ಳುತ್ತಿವೆ. ಈ ಎಲ್ಲ ಪ್ರಯತ್ನಗಳನ್ನೂ ಒಗ್ಗೂಡಿಸಿ, ರೂಪುಕೊಟ್ಟು, ಪ್ರಚುರಪಡಿಸುವ ಕಾರ್ಯ ಈಗ ಆಗಬೇಕಿದೆ.

ನರಸಿಂಹರಾಜಪುರ ತಾಲ್ಲೂಕಿನ ಮಾಗುಂಡಿಯಲ್ಲಿ ಈ ಆಣೆಕಟ್ಟು ನಿರ್ಮಾಣವಾಗಲು ಸ್ಥಳ ಆಯ್ಕೆಯಾಗಿದ್ದು ಬೃಹತ್ ನೀರಾವರಿ ಇಲಾಖೆ ಒಂದು ಫಲಿತವನ್ನು ಹಾಕಿದೆ. ರಾಜ್ಯ ಸರ್ಕಾರದ ಮಂತ್ರಿ ಮಂಡಳ ಈಗಾಗಲೇ ಈ ಯೋಜನೆಯ ನಿರ್ಮಾಣವನ್ನು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಶಿಫಾರಸು ಮಾಡಿರುವುದಾಗಿ ತಿಳಿದು ಬಂದಿದೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಕೆಲವು ಭಾಗಗಳಿಗೆ ನೀರೊದಗಿಸಲು ಈ ಯೋಜನೆಯನ್ನು ಕೈಗೊಳ್ಳಲು ನಿರ್ಧರಿಸಲಾಗಿದೆ. ಜನತಾಪಕ್ಷದ ಹಿರಿಯ ನಾಯಕರಾದ ಎಸ್. ನಿಜಲಿಂಗಪ್ಪ ಮತ್ತು ಸಚಿವರಾದ ಬಿ.ಎಲ್.ಗೌಡ ಮುಂತಾದವರು ಈ ಯೋಜನೆ ಕಾರ್ಯಗತವಾಗುವ ಬಗ್ಗೆ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದಾರೆನ್ನಲಾಗಿದೆ.

ಮುಳುಗಡೆ, ಎಲ್ಲಾ ಮುಳುಗಡೆ!

ಜಿಲ್ಲೆಯ ಮಲೆನಾಡು ಭಾಗ ಬಹಳಷ್ಟು ಸಂಪದ್ಭರಿತವಾದದ್ದು. ಇಲ್ಲಿನ ಅರಣ್ಯಗಳೂ ಬಹು ಬೆಲೆಬಾಳುವ ಬೀಟೆ, ತೇಗ, ಹೊನ್ನೆ, ಮತ್ತಿ ಮುಂತಾದ ವೃಕ್ಷ ಸಂಪತ್ತಿನಿಂದ ಕೂಡಿದ್ದರೆ, ಪ್ರತಿ ವರ್ಷವೂ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಮರಮುಟ್ಟುಗಳನ್ನು ಉತ್ಪತ್ತಿ ಮಾಡುವ ಕಾಫೀ ತೋಟಗಳಲ್ಲಿ ಅಪಾರ ವಿದೇಶೀ ವಿನಿಮಯ ತರುವ ಕಾಫಿ, ಏಲಕ್ಕಿ, ಕಾಳು ಮೆಣಸು ಅಲ್ಲದೇ ವೀಳೆಯದೆಲೆ, ಬಾಳೆ, ಕಿತ್ತಳೆ ಹಾಗೂ ಹಣ್ಣು ಹಂಪಲುಗಳು ಬೆಳೆಯುತ್ತವೆ. ಈ ಯೋಜನೆ-ಮುಳುಗಡೆ ಮತ್ತು ಪುನರ್ವಸತಿಯ ದೆಸೆಯಿಂದ ಇಂಥ ಸುಮಾರು ೨೫ ಸಾವಿರ ಎಕ್ರೆ ಅರಣ್ಯ, ಕಾಫೀ, ಏಲಕ್ಕಿ, ಕಾಳುಮೆಣಸಿನ ತೋಟಗಳು, ತರೀ ಭೂಮಿ, ಖುಷ್ಕಿಭೂಮಿ ಇತ್ಯಾದಿಗಳನ್ನು ನುಂಗಲಿದೆ.

ಲಕ್ಕವಳ್ಳಿಯಲ್ಲಿ ನಿರ್ಮಿತವಾದ ಭದ್ರಾ ಜಲಾಶಯದಿಂದಾಗಿ, ಕುದುರೆಮುಖ ಯೋಜನೆಗಾಗಿ ಹಾಗೂ ಕುದುರೆಮುಖ-ಕಾರ್ಕಳ ರಸ್ತೆ ಮತ್ತು ಕೆರೆಕಟ್ಟೆ ರಸ್ತೆಗಳ ನಿರ್ಮಾಣಕ್ಕಾಗಿ ನಮ್ಮ ಅರಣ್ಯಗಳು ಸಾಕಷ್ಟು ನಾಶವಾಗಿವೆ. ಈಗ ಉಳಿದಿರುವುದು ಭದ್ರಾ ಪಾತ್ರದ ಅರಣ್ಯಗಳು ಹಾಗೂ ಹೆಬ್ಬೆ-ಮುತ್ತೋಡಿ ಅರಣ್ಯಗಳು ಮಾತ್ರ. ಈ ಯೋಜನೆಯಿಂದ ಭದ್ರಾ ಪಾತ್ರದ ಅರಣ್ಯಗಳು ನಾಶವಾದರೆ, ನೀರಾವರಿ ಕಾಲುವೆಗಳಿಂದ ಹೆಬ್ಬೆ ಮುತ್ತೋಡಿ ಅರಣ್ಯಗಳಿಗೂ ಭದ್ರಾ ಅಭಯಾರಣ್ಯಕ್ಕೂ ಹಾನಿಯಾಗಲಿದೆ. **ಭದ್ರಾ ಪಾತ್ರದ ಭೂಮಿ ರೊಬಸ್ಟಾ ಕಾಫಿಗೆ ಪ್ರಪಂಚದಲ್ಲೇ ಉತ್ಕೃಷ್ಟವಾದದ್ದೆಂದು ಪರಿಗಣಿಸಲ್ಪಟ್ಟಿದೆ. ಅದೀಗ ಮುಳುಗಡೆಯಾಗಲಿದೆ.** ಈ ಯೋಜನೆಯಿಂದ ಕುದುರೆಮುಖ ಅದಿರು ಯೋಜನೆಗೆ ಧಕ್ಕೆಯಾಗುವುದರೊಂದಿಗೆ ಕುದುರೆಮುಖದಿಂದಾಗಿ ಆಣೆಕಟ್ಟಿನಲ್ಲಿ ಹೂಳು ತುಂಬುವ ಸಂಭವವಿದೆ.

ಜೀವನಾಡಿಗೇ ಕುತ್ತು

ಇದೆಲ್ಲಕ್ಕಿಂತಲೂ ದೊಡ್ಡ ಹಾನಿ ಸಂಭವಿಸಲಿರುವುದು ನಮ್ಮ ಹವಾಮಾನಕ್ಕೆ. ಅರಣ್ಯ ನಾಶ ಮತ್ತು ಜಲಾಶಯದಿಂದ ಜಿಲ್ಲೆಯ ಮಳೆಯ ಕಾಲಮಾನಕ್ಕೆ ಧಕ್ಕೆ ಒದಗಲಿದೆ. ಮುಖ್ಯವಾಗಿ ಕಾಫಿ ತೋಟಗಳ ಜೀವನಾಡಿಯಾದ 'ಹೂ ಮಳೆ'ಗೆ ಧಕ್ಕೆಯಾದರೆ ಇಡೀ ಜಿಲ್ಲೆಯ ಕಾಫಿ ತೋಟಗಳು ಬರಡಾಗುವ ಭೀತಿಯಿದೆ. ಜೊತೆಗೆ ಹಾಲಿ ಇರುವ ಭದ್ರಾ ಆಣೆಕಟ್ಟು ಮತ್ತು ಅದರ ಅಚ್ಚುಕಟ್ಟುದಾರರಿಗೂ ತೊಂದರೆಯಾಗುವುದು.

ಭದ್ರಾ ಮೇಲ್ದಂಡೆ ನಿರ್ಮಾಣಕ್ಕೆ ಒತ್ತಾಸೆ ಮಾಡುತ್ತಿರುವ ರಾಜ್ಯದ ಸಚಿವರಾದ ಬಿ.ಎಲ್.ಗೌಡರನ್ನು ನಮ್ಮ 'ಜಿಲ್ಲಾ ಮಂತ್ರಿ'ಯಾಗಿ ನೇಮಿಸಿರುವುದು ಇನ್ನೊಂದು ವಿಪರ್ಯಾಸ (ಅಥವಾ ಅದೊಂದು ಉದ್ದೇಶಪೂರಿತ ಸಂಚೆ?) ಈ ಜಿಲ್ಲೆಯನ್ನು ಮುಳುಗಡೆ ಮಾಡುವ ಯೋಜನೆಗೆ ಕಾರಣರಾದವರನ್ನು ಜಿಲ್ಲಾ ಮಂತ್ರಿಯಾಗದಂತೆ ವಿರೋಧಿಸುವುದೂ ಈಗ ಜಿಲ್ಲೆಯ ಜನರ ಕರ್ತವ್ಯವಾಗಿದೆ.

ವಿನಾಶಕಾರಿ ಯೋಜನೆಗೆ ವಿರೋಧ

ಹಿಂದೆ ಕಳಸ ಹೋಬಳಿಯಲ್ಲಿ 'ಭದ್ರಾ ಮೇಲ್ದಂಡೆ ಯೋಜನೆ ವಿರೋಧಿ ಸಮಿತಿ'ಯೊಂದು ರಚಿತವಾಗಿತ್ತು. ಅದು ಈಗ ರಾಜಕೀಯ ಕಾರಣಗಳಿಗಾಗಿ ನಿಷ್ಕ್ರಿಯವಾಗಿದೆ. ಆದ್ದರಿಂದ ಈ ವಿನಾಶಕಾರಿ ಯೋಜನೆಯನ್ನು ತೀವ್ರವಾಗಿ ವಿರೋಧಿಸಲು ಈಗ ರಾಜಕೀಯದಿಂದ ಮುಕ್ತರಾದ ಜನರ ಸಂಘಟನೆ ಪ್ರಾರಂಭವಾಗಿದೆ. ಜಿಲ್ಲೆಯ ಮುಂಚೂಣಿಯ ಪತ್ರಕರ್ತರಾದ ಚಿಕ್ಕಮಗಳೂರಿನ ಗಿರಿಜಾಶಂಕರ್, ಚೂಡನಾಥ ಅಯ್ಯರ್, ಬಾಳೆಹೊನ್ನೂರಿನ ಬಿ. ಎಸ್. ವಿದ್ಯಾನಂದ ಭಟ್, ಜಿ. ಎಸ್. ಕೃಷ್ಣಮೂರ್ತಿ ಹಾಗೂ ಛಾಯಾಗ್ರಾಹಕ ಶಂಕರ

(೨ನೇ ಪುಟಕ್ಕೆ)

ಕೊಪ್ಪ ಲಯನ್ಸ್ ಕ್ಲಬ್ ವತಿಯಿಂದ ಉಚಿತ ವೈದ್ಯಕೀಯ ಶಿಬಿರ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಮತ್ತು ಮದ್ರಾಸ್ ಪ್ರೆಸಿಡೆನ್ಸಿ ಲಯನ್ಸ್ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಗಾಂಧೀ ಜಯಂತಿಯಂದು ಉಚಿತ ವೈದ್ಯಕೀಯ ಶಿಬಿರ ನಡೆಯಿತು. ತಜ್ಞ ವೈದ್ಯರಾದ ಲ॥ ಡಾ॥ ಆರ್. ನಂಜುಂಡರಾವ್, ನೇತ್ರ ತಜ್ಞರಾದ ಲ॥ ಡಾ॥ ಆರ್. ಗೋಪಾಲಸ್ವಾಮಿ, ಮಹಿಳಾ ಮತ್ತು ಮಕ್ಕಳ ತಜ್ಞರಾದ ಲ॥ ಡಾ॥ ಸುಂದರವಲ್ಲಿ ಅವರುಗಳು ಭಾಗವಹಿಸಿ ನೇತ್ರ ಚಿಕಿತ್ಸೆ, ಮಹಿಳಾ ಮತ್ತು ಮಕ್ಕಳ ಆರೋಗ್ಯ ತಪಾಸಣೆ ಮತ್ತು ಸಾಮಾನ್ಯ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಗಳನ್ನು ನಡೆಸಿದರು.

ಸುಮಾರು ೨೩೦ ಜನ 'ರೋಗಿ'ಗಳು ಶಿಬಿರದಲ್ಲಿ ಭಾಗವಹಿಸಿದ್ದರು. ಲಯನ್ಸ್ ಕ್ಲಬ್ ವತಿಯಿಂದ ಔಷಧಿಗಳನ್ನು ಉಚಿತವಾಗಿ ಒದಗಿಸಲಾಯಿತು.

ನ.ರಾ.ಪುರ ಕಾಲೇಜಿನಲ್ಲಿ 'ಪ್ರತಿಭಾ ಪ್ರದರ್ಶನ'

ನ.ರಾ.ಪುರ: ಇಲ್ಲಿನ ಸ॥ ಕಿರಿಯ ಕಾಲೇಜಿನಲ್ಲಿ 'ಪ್ರತಿಭಾ ಪ್ರದರ್ಶನ' ಕಾರ್ಯಕ್ರಮ ಈಚಿಗೆ ಸಹಾಯಕ ಶಿಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಪ್ರಿನ್ಸಿಪಾಲರು ಬಹುಮಾನ ವಿತರಣೆ ಮಾಡಿದರು.

ಮುಖ್ಯ ಅತಿಥಿಗಳಾಗಿದ್ದ ಮಲೆನಾಡಿನ ಉದಯೋನ್ಮುಖ ಅಣಕು ಕಲಾವಿದ ಹೆಚ್. ವಿ. ನರಸಿಂಹ ಮೂರ್ತಿ ಹಾಸ್ಯದ ಪ್ರಕಾರಗಳನ್ನು ಉದಾಹರಣೆ ಸಹಿತ ವಿವರಿಸಿ, ಕೆಲವು ಅಣಕು ಪ್ರದರ್ಶನ ನೀಡಿ, ಸಭಿಕರನ್ನು ರಂಜಿಸಿದರು.

ಅಂದೇ ಅವರು ಇಲ್ಲಿನ ದೀಪ್ತಿ ಪ್ರೌಢಶಾಲೆಯಲ್ಲೂ ಒಂದು ಅಣಕು ಕಾರ್ಯಕ್ರಮ ನೀಡಿದರು.

ಓದುಗರ ಪತ್ರ

ಹುಲಿ ಹಾವಳಿ: "ನಮ್ಮ ಪಾಡು ಕೇಳಿ"

ಮಾನ್ಯರೆ,

ಮೊನ್ನೆಯ 'ಮುಂಜಾವು' ನಲ್ಲಿ ಬೆಳವಿನಕೊಡಿಗೆ ಗ್ರಾಮದಲ್ಲಿ ಹುಲಿ ಹಾವಳಿ ಕುರಿತ ವರದಿ ಓದಿ ಸ್ವಲ್ಪ ನಗುವಂತಾಯಿತು. ಕಾರಣ ಇಷ್ಟೆ: ಅವರ ಊರಿಗೆ ಹುಲಿ ಬಂದು ೩ ತಿಂಗಳಾಯಿತಂತೆ, ಅಷ್ಟಕ್ಕೇ ಅವರು ಇಷ್ಟು ಹುಯಿಲೆಬ್ಬಿಸುವುದಾದರೆ ನಾವು ಈಗಾಗಲೇ ಆರೇಳು ವರ್ಷಗಳಿಂದ ಹುಲಿ ಹಿಂಡಿನ ಜೊತೆಯಲ್ಲೇ ಬದುಕುತ್ತಿರುವವರು ಇನ್ನೆಷ್ಟು ಗಲಾಟೆ ಮಾಡಬೇಕು ಅಂತ. ಇರಲಿ, ತಮಾಷೆ ಬೇಡ. ವಿಷಯಕ್ಕೆ ಬರೋಣ.

ನಮ್ಮೂರಿನ ಹುಲಿ ಕಾಟ 'ಮುಂಜಾವು'ನಲ್ಲಿ ಬೇಕಾದಷ್ಟು ವರದಿಯಾಗಿ ಅಲ್ಲಿಂದ ದಾಟಿ 'ಸುಧಾ' ವಾರಪತ್ರಿಕೆಯ ಅಗ್ರಲೇಖನವೂ ಆಯಿತು. ("ಕೊಟ್ಟಿಗೆಯಲ್ಲಿ ಹುಲಿ!"— ಸುಧಾ, ಜೂನ್ ೧೯೮೪.)

'ಮುಂಜಾವು'ನಲ್ಲಾಗಲೀ, ಸುಧಾದಲ್ಲಾಗಲಿ ಈ ಹಾವಳಿಗೆ ಕಾರಣವನ್ನೂ, ಅದರಿಂದ ನಾವುಗಳು ಪಡುತ್ತಿರುವ ಬವಣೆಯನ್ನೂ, ಅದರ ನಿವಾರಣೆಗೆ ಕನಿಷ್ಠ ಮಾಡಬಹುದಾದ ಪರಿಹಾರೋಪಾಯಗಳನ್ನೂ ವಿವರವಾಗಿ ಬರೆಯಲಾಗಿತ್ತು.

'ಮುಂಜಾವು'ನ ೧೯೮೩ರ ಜೂನ್ [illegible] ಗಳ ಸಂಚಿಕೆಯೊಂದರಲ್ಲಿ ಸಂಪಾದಕರು ಶಾಸಕ ಗೋವಿಂದಗೌಡರನ್ನು ಕುರಿತು ಬರೆದ ಬಹಿರಂಗ ಪತ್ರವಂತೂ ಜೀವ ಇರುವ ಮಾನವನೇ ಆದರೂ ಈ ಸಮಸ್ಯೆ ಬಗ್ಗೆ ತಕ್ಷಣ ಕಾರ್ಯಪ್ರವೃತ್ತನಾಗಬೇಕು—ಅಷ್ಟು ಪರಿಣಾಮಕಾರಿಯಾಗಿತ್ತು, ಅಷ್ಟು ಜೀವಂತ ಚಿತ್ರಣದಿಂದ ಕೂಡಿತ್ತು.

ಆದರೆ ಪರಿಣಾಮ ಆಯಿತೆ? [illegible] ಈ ಬಗ್ಗೆ ಕಾರ್ಯಪ್ರವೃತ್ತರಾಗು[illegible], ಕಡೇ ಪಕ್ಷ ಅದನ್ನು ಓದಿ[illegible] ರೋ ಎಂಬ ಅನುಮಾನ. [illegible]

(೨ನೇ ಪುಟಕ್ಕೆ)

ಹುಲಿ ಹಾವಳಿ: "ನಮ್ಮ ಪಾಡು ಕೇಳಿ"

(೧ನೇ ಪುಟದಿಂದ)

ರದ ಅಥವಾ ಆಡಳಿತ ಯಂತ್ರದ 'ಯಾವುದೇ ಭಾಗದಲ್ಲೂ ಸಂವೇದನೆಯಾಗಲಿ, ಚಲನೆಯಾಗಲಿ ಇಲ್ಲ; ಅಲ್ಲಿ ನಮ್ಮ ಮನವಿ, ಮೊರೆಗಳಿಂದೆಲ್ಲ ಏನೂ ಪರಿಣಾಮವಾಗುವುದಿಲ್ಲ– ಎಂಬುದು ನಮ್ಮ ಅನುಭವ.

ನಮ್ಮಲ್ಲಿ ಹುಲಿಗಳುಏನೇನು ಮಾಡುತ್ತಿವೆ ಗೊತ್ತೆ?

ಹಾಡೇ ಹಗಲು ಎಲ್ಲಿ ಬೇಕೆಂದರಲ್ಲಿ, ರಸ್ತೆಯ ಮೇಲೆಯೇ ಓಡಾಡುತ್ತವೆ. ರಾತ್ರಿ ಅಂಗಳದಲ್ಲೋ, ಜಗಲಿಯಲ್ಲೋ ಮನೆಯವರೆಲ್ಲ ಕೆಲಸ ಮಾಡುತ್ತಿದ್ದರೂ ಬಂದು, ಮನೆಯ ಗೋಡೆಗೇ ಅಂಟಿಕೊಂಡಿರುವ ದನದ ಕೊಟ್ಟಿಗೆಗೆ ನುಗ್ಗಿ ಹಸುಗಳನ್ನು ಮುರಿಯುತ್ತವೆ–ಕೆಲವೊಮ್ಮೆ ಒಂದೇ ಸಲಕ್ಕೆ ಎರಡೆರಡನ್ನು—ಮತ್ತೂ ಬೇಕೆಂದರೆ ಅಲ್ಲೇ ಕೂತು ತಿನ್ನುತ್ತವೆ. ಎಮ್ಮೆಗಳು ಗುಡ್ಡದಿಂದ ರಾತ್ರಿ ಬರುತ್ತಿದ್ದರೆ ಒಂದೇ ರಾತ್ರಿ ಮೂರು–ನಾಲ್ಕು ಎಮ್ಮೆಗಳನ್ನು ಕೊಲ್ಲುತ್ತವೆ. ೯–೧೦ ವರ್ಷದ ಮಕ್ಕಳೂ ಮಾಧ್ಯಮಿಕ ಶಾಲೆಗೆ ೪-೫ ಮೈಲಿ ಕಾಡಿನಲ್ಲಿ ಹೋಗಬೇಕಾಗಿರುವಾಗ ರಸ್ತೆ ಬದಿಯೇ (ಮನೆಯಿಂದ ಒಂದು ಫರ್ಲಾಂಗ್‌ಗೂ ಒಳಗೇ) ಹುಲಿ ಕುರ್ಕ ಕೂತಿದ್ದ ಉದಾಹರಣೆಯಿದೆ. ಹಿಂದೆ ಮನುಷ್ಯರ ವಾಸನೆಗೇ ಅವು ಅಡಗುತ್ತಿದ್ದವಂತೆ, ಅಕಸ್ಮಾತ್ ಎದುರಾದರೆ ಜೋರಾಗಿ ಕೂಗೆಬ್ಬಿಸಿದರೆ ಓಡುತ್ತಿದ್ದವಂತೆ. ಈಗ ಹಾಗಿಲ್ಲ. ನಮ್ಮನ್ನು ನೋಡು-ನೋಡುತ್ತಲೇ ಕಾಡಿನಿಂದ ನಮ್ಮ ದಾರಿಗೆದುರಾಗಿ ಬಂದಿಳಿಯುತ್ತವೆ. ಜೋರಾಗಿ ಕೂಗೆಬ್ಬಿಸಿದರೆ ಓಡುವ ಬದಲು 'ಮರ್‍ರ್' ಎಂದು ಚಾಲೆಂಜ್ ಮಾಡಿ ಎರಗಲು ಸಿದ್ಧವಾಗುತ್ತವೆ.....

ಜಾನುವಾರುಗಳ ನಷ್ಟವಂತೂ ನಾವು ಯಾರಹತ್ತಿರ ಹೇಳಿಕೊಳ್ಳುವುದು ಸ್ವಾಮಿ? ಅದರ ಸಂಕಟ ಉಂಡ ನಮಗೇ ಗೊತ್ತು! ಪ್ರತಿ ಮನೆಯಿಂದಲೂ ವರ್ಷಕ್ಕೆ ಎಂಟು–ಹತ್ತು 'ಬಾಲ' ಇಲ್ಲವಾಗುತ್ತಿವೆಯೆಂದರೆ ಉತ್ಪ್ರೇಕ್ಷೆ ಎನ್ನುತ್ತೀರೇನೋ. ಈ ನಷ್ಟಕ್ಕೆ ಅರಣ್ಯ ಇಲಾಖೆ ಪರಿಹಾರ ಬೇರೆ ಕೊಡುತ್ತದೆ! ಆದರೆ ಅದಕ್ಕೆ ಆ ಫಾರೆಸ್ಟರನ್ನು, ಪಶುವೈದ್ಯ ನಿರೀಕ್ಷಕರನ್ನು ಕರೆತಂದು ದಾಖಲೆ–ಮಹಜರು ಮಾಡಿಸುವುದೆಂದರೆ...... ನಾವೆಲ್ಲ ಈಗ ಪರಿಹಾರಕ್ಕೆ ಅರ್ಜಿ ಹಾಕುವ ಗೋಜನ್ನೆ ಬಿಟ್ಟು ಬಹಳ ಕಾಲವಾಯಿತು.

ಅಲ್ಲ—ಹೆಜ್ಜೆ ಹೆಜ್ಜೆಗೆ ಹೀಗೆ ಇಪ್ಪತ್ತೆಂಟು ಅಣೆಕಟ್ಟುಗಳು, ಕುದುರೆಮುಖಗಳು, ಭಾರೀ ರಸ್ತೆಗಳು, ಕಾಫಿ ತೋಟಗಳು ಅಂತ ಒಂದು ಕಡೆಯಿಂದ ದಟ್ಟ ಕಾಡುಗಳ ನಾಶ, ಇನ್ನೊಂದು ಕಡೆಯಿಂದ ಡೈನಮೈಟ್ ಸಿಡಿತ. (ಮೂರನೆಯದು ಮೋಜಿನ ಬೇಟೆ) ನಡೆಯುತ್ತಿದ್ದರೆ ಅವಾದರೂ ಎಲ್ಲಿಗೆ ಹೋಗಬೇಕು, ಹೇಳಿ? ಇದನ್ನೆಲ್ಲ ತಡೆಯುವವರು ಯಾರು? 'ದೇಶ' ಅಭಿವೃದ್ಧಿಯಾಗಬೇಕಾದರೆ ನಾವೆಲ್ಲ ಹೀಗೆ ನಿಧಾನವಾಗಿ ನಾಶವಾಗಲೇಬೇಕೇನೋ!

ಜುಜುಬಿ ಇಪ್ಪತ್ತರದ ತೋಳಗಳು ಮನುಷ್ಯರ ಹತ್ತಿರ ಯುದ್ಧ ಮಾಡಿ ಕೊಲ್ಲುವುದು, ಮನುಷ್ಯರ ಕೈಯಿಂದಲೇ ಮಕ್ಕಳನ್ನು ಕಿತ್ತುಕೊಳ್ಳುವುದು ಸಾಧ್ಯವಿರುವಾಗ ಈ ಬಲಿಷ್ಠ ಪ್ರಾಣಿಗಳು ನಮ್ಮ ಬಾಳಿನ ಕುಡಿಗಳನ್ನು ಎಂದು ಚಿವುಟಲು ತೊಡಗುತ್ತವೋ ಎಂಬ ಭೀತಿಯಲ್ಲೇ ನಾವು ಬದುಕುತ್ತಿದ್ದೇವೆ (ಬದುಕುತ್ತಿದ್ದೇವೆಯೆ?)

ಕಾಡಿನ ಪ್ರಾಣಿಗಳನ್ನು ಅನಗತ್ಯವಾಗಿ ಕೊಲ್ಲದೆ 'ಪರಿಸರ ಚಕ್ರ'ವನ್ನು ಕಾಪಾಡುವುದರಲ್ಲಿ ಸರ್ಕಾರಕ್ಕಿಂತ ಮಣ್ಣಿನ ಮಕ್ಕಳು ಹೆಚ್ಚು ಜಾಗೃತರು. ಆದರೆ ಸರ್ಕಾರವೇ ಜನರನ್ನು ಹೀಗೆ ಹುಲಿಯ ಬಾಯಿಗೆ ಒಡ್ಡಿದರೆ ಜನರಿಗೆ ಸಾವು ಬದುಕಿನ ಪ್ರಶ್ನೆಯಾಗುತ್ತದೆ. ಆಗ ನಷ್ಟಹೊಂದುವುದು ಹುಲಿಗಳ ಸಂತತಿಯೆ. ಆದರೆ ಇದನ್ನೆಲ್ಲ ಯಾರು 'ಕೇರ್' ಮಾಡುತ್ತಾರೆ ಈ ದೇಶದಲ್ಲಿ?

ವನ್ಯಪ್ರಾಣಿ ಸಂರಕ್ಷಣಾ ಇಲಾಖೆಯೊಂದು ಇರುವಾಗ, "ಕನಿಷ್ಠ ಇವನ್ನು ಹಿಡಿದು ಅಭಯಾರಣ್ಯಕ್ಕಾದರೂ ಸಾಗಿಸಿ" ಎಂಬ ಮೊರೆಯೂ ಮನ್ನಿಸಲ್ಪಡದಿದ್ದರೆ? ಹೋದ ವರ್ಷ 'ಮುಂಜಾವು'ನಲ್ಲೇ ಪ್ರಕಟವಾಗಿದ್ದ ಒಂದು ಲೇಖನದಲ್ಲಿ ರೈತ ಯುವಕರ ಒಂದು ಎಚ್ಚರಿಕೆ ಹೀಗಿತ್ತು—"ಹುಲಿಗಳನ್ನು ಹಿಡಿದು ಅಭಯಾರಣ್ಯಕ್ಕೆ ಸಾಗಿಸುವ, ಹಾಗೂ ಅಕಸ್ಮಾತ್ ಅವುಗಳಿಂದ ಜಾನುವಾರು ನಷ್ಟವಾದರೆ ಹಿರಿಯ ಅಧಿಕಾರಿಗಳು ಸ್ಥಳಕ್ಕೇ ಬಂದು ಅಲ್ಲೇ ನ್ಯಾಯವಾದ ಬೆಲೆಯ ಪೂರ್ಣ ಕೊಡುವ ವ್ಯವಸ್ಥೆ ಮಾಡಿ. ಇಲ್ಲವಾದರೆ ಅವನ್ನು ಕೊಲ್ಲಲು ಪರವಾನಗಿಯನ್ನಾದರೂ ಕೊಡಿ!"

—ಕಿತ್ತಲೆಮನೆ-ಸಿರಿಮನೆ-ಕಾರ್ಕೆ ಸರಹದ್ದಿನ ಹಳ್ಳಿಗಳ ಗ್ರಾಮಸ್ಥರ ಪರವಾಗಿ,
ಲಕ್ಷ್ಮೀನಾರಾಯಣ, ಶೃಂಗೇರಿ ತಾ||

ತರುಣ ರೈತ ಸಂಘದ ಪುನರ್ ರಚನೆ

(ವರದಿ: ಕಲಬಿ ಶ್ರೀನಿವಾಸ್)

ಅಗಳಗಂಡಿ: ಸ್ಥಗಿತಗೊಂಡಿದ್ದ ಇಲ್ಲಿನ ಆರೇಹಳ್ಳಿ–ಅಗಳಗಂಡಿ ತರುಣ ರೈತಸಂಘವನ್ನು ವಿಸರ್ಜಿಸಿ, ನೂತನವಾಗಿ 'ಶ್ರೀ ವಿನಾಯಕ ತರುಣ ರೈತ ಸಂಘ, ಅಗಳಗಂಡಿ' ಇದರ ರಚನೆ ಈಚೆಗೆ ನಡೆಯಿತು. ಹಿಂದಿದ್ದ ಸಂಘದ ಉಪಾಧ್ಯಕ್ಷ ಹೊಸಗದ್ದೆ ಸುರೇಂದ್ರ, ಕಾರ್ಯದರ್ಶಿ ಎ.ಕೆ. ಕುಮಾರಸ್ವಾಮಿ ಇವರು ತಾ|| ಯುವಜನ ಸೇವಾಧಿಕಾರಿ ದೇವರಾಯರ ಮಾರ್ಗದರ್ಶನದಲ್ಲಿ ಈ ಪುನ[...] ಸಂಘಟನೆಯ ಚಾಲನೆ ವಹಿಸಿದ್ದರು. ಸ[...]ರಂಭದಲ್ಲಿ ಯುವಜನ ಮುಂಖಡ ಎಡ[...] ವೆಂಕಟೇಶ್ ಮತ್ತು ಪಂಚಾಯ್ತಿ ಕಾ[...]ದರ್ಶಿ ರಾಮಕೃಷ್ಣ ಭಟ್ ಅವರುಗ[...] ಹಾಜರಿದ್ದರು.

ಪದಾಧಿಕಾರಿಗಳು: ಕೆ. ಜಿ. ಕೃಷ್ಣಮೂ[...]ರ್ತಿ (ಅಧ್ಯಕ್ಷ), ಜಿ. ಎಸ್. ಉದಯ[...]ಕುಮಾರ್ (ಉಪಾಧ್ಯಕ್ಷ), ವಿಲ್ಸನ್ ಜಯ[...] (ಕಾರ್ಯದರ್ಶಿ), ಕೆ.ಆರ್. ಕೊಲ್ಲಪ್ಪ[...] (ಖಜಾಂಚಿ) ಮತ್ತು ೧೦ ಮಂದಿ ಕಾ[...]ರ್ಯಕಾರಿ ಸಮಿತಿ ಸದಸ್ಯರು.

ಭದ್ರಾ ಮೇಲ್ದಂಡೆ ಯೋಜನೆ

(೧ನೇ ಪುಟದಿಂದ)

ನಾರಾಯಣ ಭಟ್ ಮುಂತಾದವರು ಸಂಘಟನೆಗೆ ಚಾಲನೆ ಕೊಡುವ ಹೊರೆ ಹೊತ್ತಿದ್ದಾರೆ. ಕೆಲವು ಕಾಫಿ ಬೆಳೆಗಾರರು ಈ ದಿಕ್ಕಿನಲ್ಲಿ ಕಾರ್ಯಕ್ರಮ ರೂಪಿಸಲು ಉತ್ಸುಕರಾಗಿದ್ದಾರೆ, ಬೆಂಬಲವಾಗಿದ್ದಾರೆ.

ಪ್ರಕೃತಿ ಪ್ರೇಮಿಗಳು ಮತ್ತು ಜಿಲ್ಲೆ[...] ಪರಿಶ್ರಮಿ ಜನತೆ ಒಂದಾಗಿ ಈ ಯೋಜ[...]ಯನ್ನು ಪ್ರಬಲವಾಗಿ ವಿರೋಧಿಸಲು ಮುಂ[...] ಬರಬೇಕಾಗಿದೆ.

ಹೋರಾಟದ ಸೆಲೆ ಹೊರಟಿದೆ, ಜಿಲ್ಲೆಯ ಎಲ್ಲರೂ ಸೇರಿಕೊಳ್ಳಿ ಬನ್ನಿ[...] ಮಹಾನದಿಯಾಗಿ, ಪ್ರವಾಹವಾಗಿ ಮುನ್ನುಗ್ಗೋಣ. ನಮ್ಮ ಭವಿಷ್ಯವನ್ನೆ[...] (ಕಣ್ಣೀರಲ್ಲಿ) ಮುಳುಗಿಸುವ ಸಂಚಿನ 'ಕಟ್ಟೆ'ಯನ್ನು ಒಡೆಯೋಣ. ಇಲ್ಲ[...] ಸಮೃದ್ಧಿಯನ್ನು ತರುವ ಹೆಸರಲ್ಲಿ, ಇರುವ ಸಮೃದ್ಧಿಯನ್ನು ನಾಶ ಮಾಡ ಹೊ[...]ಟಿರುವ ಶಕ್ತಿಯನ್ನು ಬಗ್ಗಿಸೋಣ. ನಮ್ಮ ಬಾಳಿಗೆ ವಿಷದ ಹಣ್ಣು ಬಿಡಲಿರು[...] ಹೆಮ್ಮರವಾಗುವುದನ್ನು ಮೊಳಕೆಯಲ್ಲೇ ಚಿವುಟೋಣ. ನಮ್ಮ ಪರಿಸರ ರಕ್ಷಿಸಲ[...] ಒಂದು ಚಳುವಳಿಯಾಗೋಣ.

ಬನ್ನಿ, ನಿಮ್ಮೊಂದಿಗೆ ಒಗ್ಗಟ್ಟು ತನ್ನಿ, ಚೈತನ್ಯ ತನ್ನಿ.
ಬಿರುಕು, ಭೇದ ಭಾವ ಹಿಂದಕ್ಕೇ ಬಿಟ್ಟು ಬನ್ನಿ.

ಶಂಕರ್ ಸಾರಿಗೆ ಸಂಸ್ಥೆಯಲ್ಲಿ ರಂಜನೀಯ ನವರಾತ್ರಿ

ಕೊಪ್ಪ: ಇಲ್ಲಿನ ಶಂಕರ್ ಸಾರಿಗೆ ಸಂಸ್ಥೆಯ ಕಾರ್ಮಿಕರಿಗೂ ಸಾಮಾನ್ಯವಾಗಿ ಬೇರೆಲ್ಲಾ ಕೈಗಾರಿಕೆಗಳಂತೆ, ನವರಾತ್ರಿ–ಆಯುಧ ಪೂಜೆ ಎಂದರೆ ವಿಶೇಷ ಸಂಭ್ರಮದ ಅವಕಾಶ. ಯಂತ್ರಗಳು ಮತ್ತು ಸಲಕರಣೆಗಳನ್ನೆಲ್ಲ ಸ್ವಚ್ಛಗೊಳಿಸಿ ಜೋಡಿಸಿ ಅಲಂಕರಿಸಿ, ಪೂಜೆ–ಹಬ್ಬ ಆಚರಿಸುವುದು ಮಾಮೂಲು.

ಅದಕ್ಕಿಂತ ವಿಶೇಷವಾದ ಮಾಮೂಲು ಎಂದರೆ ಅಂದು ಸಂಜೆ ನಡೆಯುವ ವಿವಿಧ ಮನರಂಜನೆಗಳ ಸಾಂಸ್ಕೃತಿಕ ಕಾರ್ಯಕ್ರಮ. ಈ ವರ್ಷ ಈ ಕಾರ್ಯಕ್ರಮ ಬಹುಶಃ ಹಿಂದಿಗಿಂತಲೂ ಹೆಚ್ಚು ಸುಂದರವಾಗಿದ್ದು, ಅಪಾರ ಜನತೆಯನ್ನು ಆಕರ್ಷಿಸಿತು.

(ಎ.ಮನೋಹರರಾವ್ ಆಟೋಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿದರು. ಶಿವಮೊಗ್ಗದ ಕಲಾವಿದರಿಂದ 'ಸುಗಮ ಸಂಗೀತ'ದ ಕಾರ್ಯಕ್ರಮ ಹಾಗೂ ಮಲೆನಾಡಿನ ಉದಯೋನ್ಮುಖ ಅಣಕು ಕಲಾವಿದ ಹೆಚ್.ವಿ. ನರಸಿಂಹಮೂರ್ತಿಯವರ ಅಣಕು ಪ್ರದರ್ಶನ ನಡೆದವು.)

ಪ್ರತಿಭೆಯ ಸಂತೆ !

ಸಂಜೆಯ ಈ ಕಾರ್ಯಕ್ರಮವೆಂದರೆ ಪ್ರತಿಭೆಯ ಒಂದು ಸಂತೆಯೇ ಸೇರಿದಂತೆ ಎಂಬುದು ಈ ಊರಿನ ಎಷ್ಟು ಜನರಿಗೆ ಗೊತ್ತಿದೆಯೋ. ಎಷ್ಟು ಜನ ಕಲಾವಿದರು, ಎಷ್ಟು ಸುಮಧುರ ಕಂಠಗಳು! ಮೈಯೆಲ್ಲ ಕರುಕು ಕೀಲೆಣ್ಣೆ ಮೆತ್ತಿಸಿಕೊಂಡು, ಯಾವ್ಯಾವುದೋ ಪಾಳಿ(ಅವಧಿ)ಗಳಲ್ಲಿ ದಿನಕ್ಕೆ ಎಷ್ಟೆಷ್ಟೋ ಗಂಟೆ ದುಡಿಯುವ ಈ ದೇಹಗಳೊಳಗೆ ಒಂದೊಂದು ಶುಭ್ರ ಗೂಡುಗಳಲ್ಲಿ ಇಷ್ಟೊಂದು ಕಲೆಯಿದೆ, ಪ್ರತಿಭೆಯಿದೆ, ಅದನ್ನು ಪೋಷಿಸುವ–ಆಸ್ವಾದಿಸುವ ಸ್ಫಟಿಕದ ಹೃದಯವಿದೆ ಎಂಬುದನ್ನು ಅರಿಯಬೇಕಾದರೆ ಇಂಥದೊಂದು ಕಾರ್ಯಕ್ರಮಕ್ಕೇ ಬರಬೇಕು.

ಲೆಕ್ಕಕ್ಕೆ ಬೇರೆ ಊರಿನ ಯಾವುದೋ ಒಂದು ಪಾರ್ಟಿಯ ಏನಾದರೂ ಒಂದು ಕಾರ್ಯಕ್ರಮ ಪ್ರಮುಖ ಆಕರ್ಷಣೆಯಾಗಿರುತ್ತದಾದರೂ ಇಲ್ಲಿ ಸ್ವಂತದ (ಸ್ಥಳೀಯ) ಪ್ರತಿಭೆಗಳ ಪ್ರದರ್ಶನವೇ ನಿಜವಾದ ಆಕರ್ಷಣೆ. ಹೆಚ್ಚಾಗಿ ಪ್ರದರ್ಶನಗೊಳ್ಳುದು ಗಾಯನ ಸಿರಿ. ಪ್ರಮುಖವಾಗಿ ಕನ್ನಡದ ಜನಪದ ಗೀತೆ–ಭಾವಗೀತೆ–ಚಿತ್ರಗೀತೆಗಳೇ. ಅಲ್ಲೊಂದು ಇಲ್ಲೊಂದು ತೆಲುಗು–ತಮಿಳು–ತುಳು-ಹಿಂದಿ ಗೀತೆಗಳೂ ಕೇಳುವುದುಂಟು.

ದುಡಿವವರ ಹಬ್ಬದಲ್ಲಿ ಮೇಲಿಲ್ಲ, ಕೀಳಿಲ್ಲ, ಸಣ್ಣತನವಿಲ್ಲ

ಈ ಹಬ್ಬಕ್ಕೆ ಆಟೋಟಗಳ ಅಂಗವೂ ಉಂಟು. ದೊಡ್ಡವರು–ಚಿಕ್ಕವರು ಅಂತ ಇಲ್ಲ, ಮೇಲು-ಕೀಳಿಲ್ಲ. ಅಚ್ಯುತಣ್ಣನಂಥ ಹಿರಿಯರೂ 'ಕಣ್ಣು ಕಟ್ಟಿ ಮಡಕೆ ಒಡೆಯುವ' ಸ್ಪರ್ಧೆಯಲ್ಲಿ ಒಂದು ಬಹುಮಾನ ಹೊಡೆದು ಸಹೋದ್ಯೋಗಿಗಳ ಎದೆಯಲ್ಲಿ ಮುದ ತುಂಬುತ್ತಾರೆ.

ಇಲ್ಲಿ ಎಲ್ಲಾ ಜಾತಿಗಳವರಿದ್ದಾರೆ, ಎಲ್ಲಾ ಧರ್ಮಗಳವರಿದ್ದಾರೆ. ಆದರೆ, ಕೋಮು–ಧರ್ಮಗಳ ಹೆಸರಿನ ಯಾವ ಸಣ್ಣತನವೂ ಇಲ್ಲಿ ತಲೆ ಹಾಕುವುದಿಲ್ಲ. ಇದು ಅವರೆಲ್ಲರ ಹಬ್ಬ—ಅವರ ಕೈಗೆ ಕೆಲಸ ಕೊಟ್ಟು, ಅವರನ್ನು ಸಾಕುತ್ತಿರುವ ಸಾಧನಗಳನ್ನು ಪೂ[...]ಜಿಸಿ–ಗೌರವಿಸುವ 'ದುಡಿವವರ ಹಬ್ಬ'

ಅನಾಗರಿಕ?

ಮೈ ಮುರಿದು ದುಡಿವ ಜನರನ್ನು ಕೀಳೆಂ[...]ದು ಪರಿಗಣಿಸುವ ಸಮಾಜ, ಅವರ ಅಭಿ[...]ರುಚಿ, ನಡತೆಗಳನ್ನೂ ಸಹ ಕೀಳೆಂದು, ಅ[...]ನಾಗರಿಕವೆಂದು, ಅನುಮಾನಾಸ್ಪದವೆಂದು[...] ನಂಬಿಕೊಂಡಿದೆ. ಆದರೆ, ಇಲ್ಲಿ ಬಂದರೆ ನಿ[...]ಮ್ಮ ಆ ನಂಬಿಕೆ ಚೂರಾಗುತ್ತದೆ. ಕಿಕ್ಕಿರಿದ[...] ಸಭಾಂಗಣದಲ್ಲಿ ಹರಯದ ಹುಡುಗರೊಡನೆ[...] ಹೆಣ್ಣು ಮಕ್ಕಳೂ ನಿಸ್ಸಂಕೋಚವಾಗಿ ಕಾ[...]ರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳು[...]ತ್ತಾರೆ. ಮಧ್ಯೆ ಗಂಟೆಗಟ್ಟಲೆ ಕರೆಂಟ್[...] ಹೋಗಿ ಕಗ್ಗತ್ತಲು ಆವರಿಸಿದರೂ ಒಂದು[...] ಸಣ್ಣ ಅಹಿತಕರ ಘಟನೆಯೂ ನಡೆಯುವು[...]ದಿಲ್ಲವೆಂದರೆ—ಈ ವಾತಾವರಣದ ಸಭ್ಯತೆ, ನಾಗರೀಕತೆ ನಮ್ಮನ್ನು ಅಣಕಿಸಬೇಕು, ನ[...]ಮ್ಮ ಪೊಳ್ಳು ನಂಬಿಕೆಗಳನ್ನು ಚುಚ್ಚಬೇಕು[...]

ಲೋಪದೋಷಗಳನ್ನು ತಿದ್ದಿಕೊಂಡು[...] ಇವರ ಕಲೆ-ಸಾಧನೆ ನೂರ್ಮಡಿಯಾಗಲಿ. ಕೊಪ್ಪದ ಸಾಂಸ್ಕೃತಿಕ ಜಡತೆ ತೊಲಗಿಸಿ[...] ಲವಲವಿಕೆ ಹರಡಲಿ. ಅವರ ಈ ಭಾವೈಕ್ಯತೆ[...] ಎಂದೂ ಒಡೆಯದಿರಲಿ – ಎಂದು ಹಾರೈಸು[...]ತ್ತೇನೆ.

—ಒಬ್ಬ ಕಲಾಭಿಮಾನಿ, ಕೊಪ್ಪ.

ರಕ್ತದಾನ ಎಲ್ಲಕ್ಕಿಂತ ಶ್ರೇಷ್ಠ ದಾನ
ರಕ್ತ ದಾನ ಮಾಡಿ,
ಮಹಾದಾನಿಗಳೆನಿಸಿಕೊಳ್ಳಿ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: **ಸಿರಿಮನೆ ನಾಗರಾಜ್,** ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ. ಶೃಂಗೇರಿ ಪ್ರತಿನಿಧಿ: **ಕಲ್ಕುಳಿ ವಿಠಲ ಹೆಗ್ಡೆ**

ಹುಲಿ ಹಾವಳಿ: "ನಮ್ಮ ಪಾಡು ಕೇಳಿ"

(೧ನೇ ಪುಟದಿಂದ)

ರದ ಅಥವಾ ಆಡಳಿತ ಯಂತ್ರದ 'ಯಾವುದೇ ಭಾಗದಲ್ಲೂ ಸಂವೇದನೆಯಾಗಲಿ, ಚಲನೆಯಾಗಲಿ ಇಲ್ಲ; ಅಲ್ಲಿ ನಮ್ಮ ಮನವಿ, ಮೊರೆಗಳಿಂದೆಲ್ಲ ಏನೂ ಪರಿಣಾಮವಾಗುವುದಿಲ್ಲ- ಎಂಬುದು ನಮ್ಮ ಅನುಭವ.

ನಮ್ಮಲ್ಲಿ ಹುಲಿಗಳುಏನೇನು ಮಾಡುತ್ತಿವೆ ಗೊತ್ತೆ?

ಹಾಡೇ ಹಗಲು ಎಲ್ಲಿ ಬೇಕೆಂದರಲ್ಲಿ, ರಸ್ತೆಯ ಮೇಲೆಯೇ ಓಡಾಡುತ್ತವೆ. ರಾತ್ರಿ ಅಂಗಳದಲ್ಲೋ, ಜಗಲಿಯಲ್ಲೋ ಮನೆಯವರೆಲ್ಲ ಕೆಲಸ ಮಾಡುತ್ತಿದ್ದರೂ ಬಂದು, ಮನೆಯ ಗೋಡೆಗೇ ಅಂಟಿಕೊಂಡಿರುವ ದನದ ಕೊಟ್ಟಿಗೆಗೆ ನುಗ್ಗಿ ಹಸುಗಳನ್ನು ಮುರಿಯುತ್ತವೆ-ಕೆಲವೊಮ್ಮೆ ಒಂದೇ ಸಲಕ್ಕೆ ಎರಡೆರಡನ್ನು—ಮತ್ತೂ ಬೇಕೆಂದರೆ ಅಲ್ಲೇ ಕೂತು ತಿನ್ನುತ್ತವೆ. ಎಮ್ಮೆಗಳು ಗುಡ್ಡದಿಂದ ರಾತ್ರಿ ಬರುತ್ತಿದ್ದರೆ ಒಂದೇ ರಾತ್ರಿ ಮೂರು-ನಾಲ್ಕು ಎಮ್ಮೆಗಳನ್ನು ಕೊಲ್ಲುತ್ತವೆ. ೯-೧೦ ವರ್ಷದ ಮಕ್ಕಳೂ ಮಾಧ್ಯಮಿಕ ಶಾಲೆಗೆ ೪-೫ ಮೈಲಿ ಕಾಡಿನಲ್ಲಿ ಹೋಗಬೇಕಾಗಿರುವಾಗ ರಸ್ತೆ ಬದಿಯೇ (ಮನೆಯಿಂದ ಒಂದು ಫರ್ಲಾಂಗ್‌ಗೂ ಒಳಗೇ) ಹುಲಿ ಕುರ್ಕ ಕೂತಿದ್ದ ಉದಾಹರಣೆಯಿದೆ. ಹಿಂದೆ ಮನುಷ್ಯರ ವಾಸನೆಗೇ ಅವು ಅಡಗುತ್ತಿದ್ದವಂತೆ, ಆಕಸ್ಮಾತ್ ಎದುರಾದರೆ ಜೋರಾಗಿ ಕೂಗೆಬ್ಬಿಸಿದರೆ ಓಡುತ್ತಿದ್ದವಂತೆ. ಈಗ ಹಾಗಿಲ್ಲ. ನಮ್ಮನ್ನು ನೋಡು-ನೋಡುತ್ತಲೇ ಕಾಡಿನಿಂದ ನಮ್ಮ ದಾರಿಗೆದುರಾಗಿ ಬಂದಿಳಿಯುತ್ತವೆ. ಜೋರಾಗಿ ಕೂಗೆಬ್ಬಿಸಿದರೆ ಓಡುವ ಬದಲು 'ಮರ್‍ರ್' ಎಂದು ಚಾಲೆಂಜ್ ಮಾಡಿ ಎರಗಲು ಸಿದ್ಧವಾಗುತ್ತವೆ.....

ಜಾನುವಾರುಗಳ ನಷ್ಟವಂತೂ ನಾವು ಯಾರಹತ್ತಿರ ಹೇಳಿಕೊಳ್ಳುವುದು ಸ್ವಾಮಿ? ಅದರ ಸಂಕಟ ಉಂಡ ನಮಗೇ ಗೊತ್ತು! ಪ್ರತಿ ಮನೆಯಿಂದಲೂ ವರ್ಷಕ್ಕೆ ಎಂಟು-ಹತ್ತು 'ಬಾಲ' ಇಲ್ಲವಾಗುತ್ತಿವೆಯೆಂದರೆ ಉತ್ಪ್ರೇಕ್ಷೆ ಎನ್ನುತ್ತೀರೇನೋ. ಈ ನಷ್ಟಕ್ಕೆ ಅರಣ್ಯ ಇಲಾಖೆ ಪರಿಹಾರ ಬೇರೆ ಕೊಡುತ್ತದೆ! ಆದರೆ ಅದಕ್ಕೆ ಆ ಫಾರೆಸ್ಟರನ್ನು, ಪಶುವೈದ್ಯ ನಿರೀಕ್ಷಕರನ್ನು ಕರೆತಂದು ದಾಖಲೆ-ಮಹಜರು ಮಾಡಿಸುವುದೆಂದರೆ...... ನಾವೆಲ್ಲ ಈಗ ಪರಿಹಾರಕ್ಕೆ ಅರ್ಜಿ ಹಾಕುವ ಗೋಜನ್ನೆ ಬಿಟ್ಟು ಬಹಳ ಕಾಲವಾಯಿತು.

ಅಲ್ಲ—ಹೆಜ್ಜೆ ಹೆಜ್ಜೆಗೆ ಹೀಗೆ ಇಪ್ಪತ್ತೆಂಟು ಅಣೆಕಟ್ಟುಗಳು, ಕುದುರೆಮುಖಗಳು, ಭಾರೀ ರಸ್ತೆಗಳು, ಕಾಫಿ ತೋಟಗಳು ಅಂತ ಒಂದು ಕಡೆಯಿಂದ ದಟ್ಟ ಕಾಡುಗಳ ನಾಶ, ಇನ್ನೊಂದು ಕಡೆಯಿಂದ ಡೈನಮೈಟ್ ಸಿಡಿತ. (ಮೂರನೆಯದು ಮೋಜಿನ ಬೇಟೆ) ನಡೆಯುತ್ತಿದ್ದರೆ ಅವಾದರೂ ಎಲ್ಲಿಗೆ ಹೋಗಬೇಕು, ಹೇಳಿ? ಇದನ್ನೆಲ್ಲ ತಡೆಯುವವರು ಯಾರು? 'ದೇಶ' ಅಭಿವೃದ್ಧಿಯಾಗಬೇಕಾದರೆ ನಾವೆಲ್ಲ ಹೀಗೆ ನಿಧಾನವಾಗಿ ನಾಶವಾಗಲೇಬೇಕೇನೋ!

ಜುಜುಬಿ ಇಪ್ಪತ್ತೈದರ ತೋಳಗಳು ಮನುಷ್ಯರ ಹತ್ತಿರ ಯುದ್ಧ ಮಾಡಿ ಕೊಲ್ಲುವುದು, ಮನುಷ್ಯರ ಕೈಯಿಂದಲೇ ಮಕ್ಕಳನ್ನು ಕಿತ್ತುಕೊಳ್ಳುವುದು ಸಾಧ್ಯವಿರುವಾಗ ಈ ಬಲಿಷ್ಠ ಪ್ರಾಣಿಗಳು ನಮ್ಮ ಬಾಳಿನ ಕುಡಿಗಳನ್ನು ಎಂದು ಚಿವುಟಲು ತೊಡಗುತ್ತವೋ ಎಂಬ ಭೀತಿಯಲ್ಲೇ ನಾವು ಬದುಕುತ್ತಿದ್ದೇವೆ (ಬದುಕುತ್ತಿದ್ದೇವೆಯೆ?)

ಕಾಡಿನ ಪ್ರಾಣಿಗಳನ್ನು ಅನಗತ್ಯವಾಗಿ ಕೊಲ್ಲದೆ 'ಪರಿಸರ ಚಕ್ರ'ವನ್ನು ಕಾಪಾಡುವುದರಲ್ಲಿ ಸರ್ಕಾರಕ್ಕಿಂತ ಮಣ್ಣಿನ ಮಕ್ಕಳು ಹೆಚ್ಚು ಜಾಗೃತರು. ಆದರೆ ಸರ್ಕಾರವೇ ಜನರನ್ನು ಹೀಗೆ ಹುಲಿಯ ಬಾಯಿಗೆ ಒಡ್ಡಿದರೆ ಜನರಿಗೆ ಸಾವು ಬದುಕಿನ ಪ್ರಶ್ನೆಯಾಗುತ್ತದೆ. ಆಗ ನಷ್ಟಹೊಂದುವುದು ಹುಲಿಗಳ ಸಂತತಿಯೆ. ಆದರೆ ಇದನ್ನೆಲ್ಲ ಯಾರು 'ಕೇರ್' ಮಾಡುತ್ತಾರೆ ಈ ದೇಶದಲ್ಲಿ?

ವನ್ಯಪ್ರಾಣಿ ಸಂರಕ್ಷಣಾ ಇಲಾಖೆಯೊಂದು ಇರುವಾಗ, "ಕನಿಷ್ಠ ಇವನ್ನು ಹಿಡಿದು ಅಭಯಾರಣ್ಯಕ್ಕಾದರೂ ಸಾಗಿಸಿ" ಎಂಬ ಮೊರೆಯೂ ಮನ್ನಿಸಲ್ಪಡದಿದ್ದರೆ? ಹೋದ ವರ್ಷ 'ಮುಂಜಾವು'ನಲ್ಲೇ ಪ್ರಕಟವಾಗಿದ್ದ ಒಂದು ಲೇಖನದಲ್ಲಿ ರೈತ ಯುವಕರ ಒಂದು ಎಚ್ಚರಿಕೆ ಹೀಗಿತ್ತು—"ಹುಲಿಗಳನ್ನು ಹಿಡಿದು ಅಭಯಾರಣ್ಯಕ್ಕೆ ಸಾಗಿಸುವ, ಹಾಗೂ ಆಕಸ್ಮಾತ್ ಅವುಗಳಿಂದ ಜಾನುವಾರು ನಷ್ಟವಾದರೆ ಹಿರಿಯ ಅಧಿಕಾರಿಗಳು ಸ್ಥಳಕ್ಕೇ ಬಂದು ಅಲ್ಲೇ ನ್ಯಾಯವಾದ ಬೆಲೆಯ ಪೂರ್ಣ ಕೊಡುವ ವ್ಯವಸ್ಥೆ ಮಾಡಿ. ಇಲ್ಲವಾದರೆ ಅವನ್ನು ಕೊಲ್ಲಲು ಪರವಾನಗಿಯನ್ನಾದರೂ ಕೊಡಿ!"

—ಕಿತ್ತಲೆಮನೆ-ಸಿರಿಮನೆ-ಕಾರ್ಕೆ ಸರಹದ್ದಿನ ಹಳ್ಳಿಗಳ ಗ್ರಾಮಸ್ಥರ ಪರವಾಗಿ,
ಲಕ್ಷ್ಮೀನಾರಾಯಣ, ಶೃಂಗೇರಿ ತಾ||

ತರುಣ ರೈತ ಸಂಘದ ಪುನರ್ ರಚನೆ

(ವರದಿ: ಕಲಬಿ ಶ್ರೀನಿವಾಸ್)

ಅಗಳಗಂಡಿ: ಸ್ಥಗಿತಗೊಂಡಿದ್ದ ಇಲ್ಲಿನ ಆರೇಹಳ್ಳಿ-ಅಗಳಗಂಡಿ ತರುಣ ರೈತಸಂಘವನ್ನು ವಿಸರ್ಜಿಸಿ, ನೂತನವಾಗಿ 'ಶ್ರೀ ವಿನಾಯಕ ತರುಣ ರೈತ ಸಂಘ, ಅಗಳಗಂಡಿ' ಇದರ ರಚನೆ ಈಚೆಗೆ ನಡೆಯಿತು. ಹಿಂದಿದ್ದ ಸಂಘದ ಉಪಾಧ್ಯಕ್ಷ ಹೊಸಗದ್ದೆ ಸುರೇಂದ್ರ, ಕಾರ್ಯದರ್ಶಿ ಎ೯.ಕೆ. ಕುಮಾರಸ್ವಾಮಿ ಇವರು ತಾ|| ಯುವಜನ ಸೇವಾಧಿಕಾರಿ ದೇವರಾಯರ ಮಾರ್ಗದರ್ಶನದಲ್ಲಿ ಈ ಪುನ ಸಂಘಟನೆಯ ಚಾಲನೆ ವಹಿಸಿದ್ದರು. ಸ ರಂಭದಲ್ಲಿ ಯುವಜನ ಮುಂಖಡ ಎಡ ವೆಂಕಟೇಶ್ ಮತ್ತು ಪಂಚಾಯ್ತಿ ಕ ದರ್ಶಿ ರಾಮಕೃಷ್ಣ ಭಟ್ ಅವರುಗ ಹಾಜರಿದ್ದರು.

ಪದಾಧಿಕಾರಿಗಳು: ಕೆ. ಜಿ. ಕೃಷ್ಣ ಮ ರ್ತಿ (ಅಧ್ಯಕ್ಷ), ಜಿ. ಎಸ್. ಉದಯ ಮಾರ್ (ಉಪಾಧ್ಯಕ್ಷ), ವಿಲ್ಸನ್‌ಜಯ (ಕಾರ್ಯದರ್ಶಿ), ಕೆ.ಆರ್. ಕೊಲ್ಲಪ್ಪ (ಖಜಾಂಚಿ) ಮತ್ತು ೧೦ ಮಂದಿ ಕ ಕಾರಿ ಸಮಿತಿ ಸದಸ್ಯರು.

ಭದ್ರಾ ಮೇಲ್ದಂಡೆ ಯೋಜನೆ

(೧ನೇ ಪುಟದಿಂದ)

ನಾರಾಯಣ ಭಟ್ ಮುಂತಾದವರು ಸಂಘಟನೆಗೆ ಚಾಲನೆ ಕೊಡುವ ಹೊರೆ ಹೊತ್ತಿದ್ದಾರೆ. ಕೆಲವು ಕಾಫಿ ಬೆಳೆಗಾರರು ಈ ದಿಕ್ಕಿನಲ್ಲಿ ಕಾರ್ಯಕ್ರಮ ರೂಪಿಸಲು ಉತ್ಸುಕರಾಗಿದ್ದಾರೆ, ಬೆಂಬಲವಾಗಿದ್ದಾರೆ.

ಪ್ರಕೃತಿ ಪ್ರೇಮಿಗಳು ಮತ್ತು ಜಿಲ್ಲೆ ಪರಿಶ್ರಮಿ ಜನತೆ ಒಂದಾಗಿ ಈ ಯೋಜ ಯನ್ನು ಪ್ರಬಲವಾಗಿ ವಿರೋಧಿಸಲು ಮು ಬರಬೇಕಾಗಿದೆ.

ಹೋರಾಟದ ಸೆಲೆ ಹೊರಟಿದೆ, ಜಿಲ್ಲೆಯ ಎಲ್ಲರೂ ಸೇರಿಕೊಳ್ಳಿ ಬನ್ನಿ ಮಹಾನದಿಯಾಗಿ, ಪ್ರವಾಹವಾಗಿ ಮುನ್ನುಗ್ಗೋಣ. ನಮ್ಮ ಭವಿಷ್ಯವನ್ನ (ಕಣ್ಣೀರಲ್ಲಿ) ಮುಳುಗಿಸುವ ಸಂಚಿನ 'ಕಟ್ಟೆ'ಯನ್ನು ಒಡೆಯೋಣ. ಇಲ್ಲ ಸಮೃದ್ಧಿಯನ್ನು ತರುವ ಹೆಸರಲ್ಲಿ, ಇರುವ ಸಮೃದ್ಧಿಯನ್ನು ನಾಶ ಮಾಡ ಹೊ ಟಿರುವ ಶಕ್ತಿಯನ್ನು ಬಗ್ಗಿಸೋಣ. ನಮ್ಮ ಬಾಳಿಗೆ ವಿಷದ ಹಣ್ಣು ಬಿಡಲಿರು ಹೆಮ್ಮರವಾಗುವುದನ್ನು ಮೊಳಕೆಯಲ್ಲೇ ಚಿವುಟೋಣ. ನಮ್ಮ ಪರಿಸರ ರಕ್ಷಿಸಲ ಒಂದು ಚಳುವಳಿಯಾಗೋಣ.

ಬನ್ನಿ, ನಿಮ್ಮೊಂದಿಗೆ ಒಗ್ಗಟ್ಟು ತನ್ನಿ, ಚೈತನ್ಯ ತನ್ನಿ.
ಬಿರುಕು, ಭೇದ ಭಾವ ಹಿಂದಕ್ಕೇ ಬಿಟ್ಟು ಬನ್ನಿ.

ಶಂಕರ್ ಸಾರಿಗೆ ಸಂಸ್ಥೆಯಲ್ಲಿ ರಂಜನೀಯ ನವರಾತ್ರಿ

ಕೊಪ್ಪ: ಇಲ್ಲಿನ ಶಂಕರ್ ಸಾರಿಗೆ ಸಂಸ್ಥೆಯ ಕಾರ್ಮಿಕರಿಗೂ ಸಾಮಾನ್ಯವಾಗಿ ಬೇರೆಲ್ಲಾ ಕೈಗಾರಿಕೆಗಳಂತೆ, ನವರಾತ್ರಿ-ಆಯುಧ ಪೂಜೆ ಎಂದರೆ ವಿಶೇಷ ಸಂಭ್ರಮದ ಅವಕಾಶ. ಯಂತ್ರಗಳು ಮತ್ತು ಸಲಕರಣೆಗಳನ್ನೆಲ್ಲ ಸ್ವಚ್ಛಗೊಳಿಸಿ ಜೋಡಿಸಿ ಅಲಂಕರಿಸಿ, ಪೂಜೆ-ಹಬ್ಬ ಆಚರಿಸುವುದು ಮಾಮೂಲು.

ಅದಕ್ಕಿಂತ ವಿಶೇಷವಾದ ಮಾಮೂಲು ಎಂದರೆ ಅಂದು ಸಂಜೆ ನಡೆಯುವ ವಿವಿಧ ಮನರಂಜನೆಗಳ ಸಾಂಸ್ಕೃತಿಕ ಕಾರ್ಯಕ್ರಮ. ಈ ವರ್ಷ ಈ ಕಾರ್ಯಕ್ರಮ ಬಹುಶಃ ಹಿಂದಿಗಿಂತಲೂ ಹೆಚ್ಚು ಸುಂದರವಾಗಿದ್ದು, ಅಪಾರ ಜನತೆಯನ್ನು ಆಕರ್ಷಿಸಿತು.

(ಎ.ಮನೋಹರರಾವ್ ಆಟೋಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿದರು. ಶಿವಮೊಗ್ಗದ ಕಲಾವಿದರಿಂದ 'ಸುಗಮ ಸಂಗೀತ'ದ ಕಾರ್ಯಕ್ರಮ ಹಾಗೂ ಮಲೆನಾಡಿನ ಉದಯೋನ್ಮುಖ ಅಣಕು ಕಲಾವಿದ ಹೆಚ್.ವಿ. ನರಸಿಂಹಮೂರ್ತಿಯವರ ಅಣಕು ಪ್ರದರ್ಶನ ನಡೆದವು.)

ಪ್ರತಿಭೆಯ ಸಂತೆ !

ಸಂಜೆಯ ಈ ಕಾರ್ಯಕ್ರಮವೆಂದರೆ ಪ್ರತಿಭೆಯ ಒಂದು ಸಂತೆಯೇ ಸೇರಿದಂತೆ ಎಂಬುದು ಈ ಊರಿನ ಎಷ್ಟು ಜನರಿಗೆ ಗೊತ್ತಿದೆಯೋ. ಎಷ್ಟು ಜನ ಕಲಾವಿದರು, ಎಷ್ಟು ಸುಮಧುರ ಕಂಠಗಳು! ಮೈಯೆಲ್ಲ ಕರುಕು ಕೀಲೆಣ್ಣೆ ಮೆತ್ತಿಸಿಕೊಂಡು, ಯಾವ್ಯಾವುದೋ ಪಾಳಿ(ಅವಧಿ)ಗಳಲ್ಲಿ ದಿನಕ್ಕೆ ಎಷ್ಟೆಷ್ಟೋ ಗಂಟೆ ದುಡಿಯುವ ಈ ದೇಹಗಳೊಳಗೆ ಒಂದೊಂದು ಶುಭ್ರ ಗೂಡುಗಳಲ್ಲಿ ಇಷ್ಟೊಂದು ಕಲೆಯಿದೆ, ಪ್ರತಿಭೆಯಿದೆ, ಅದನ್ನು ಪೋಷಿಸುವ-ಆಸ್ವಾದಿಸುವ ಸ್ಫಟಿಕದ ಹೃದಯವಿದೆ ಎಂಬುದನ್ನು ಅರಿಯಬೇಕಾದರೆ ಇಂಥದೊಂದು ಕಾರ್ಯಕ್ರಮಕ್ಕೇ ಬರಬೇಕು.

ಲೆಕ್ಕಕ್ಕೆ ಬೇರೆ ಊರಿನ ಯಾವುದೋ ಒಂದು ಪಾರ್ಟಿಯ ಏನಾದರೂ ಒಂದು ಕಾರ್ಯಕ್ರಮ ಪ್ರಮುಖ ಆಕರ್ಷಣೆಯಾಗಿರುತ್ತದಾದರೂ ಇಲ್ಲಿ ಸ್ವಂತದ (ಸ್ಥಳೀಯ) ಪ್ರತಿಭೆಗಳ ಪ್ರದರ್ಶನವೇ ನಿಜವಾದ ಆಕರ್ಷಣೆ. ಹೆಚ್ಚಾಗಿ ಪ್ರದರ್ಶನಗೊಳ್ಳುದು ಗಾಯನ ಸಿರಿ. ಪ್ರಮುಖವಾಗಿ ಕನ್ನಡದ ಜನಪದ ಗೀತೆ-ಭಾವಗೀತೆ-ಚಿತ್ರಗೀತೆಗಳೇ. ಅಲ್ಲೊಂದು ಇಲ್ಲೊಂದು ತೆಲುಗು-ತಮಿಳು-ತುಳು-ಹಿಂದಿ ಗೀತೆಗಳೂ ಕೇಳುವುದುಂಟು.

ದುಡಿವವರ ಹಬ್ಬದಲ್ಲಿ ಮೇಲಿಲ್ಲ, ಕೀಳಿಲ್ಲ, ಸಣ್ಣತನವಿಲ್ಲ

ಈ ಹಬ್ಬಕ್ಕೆ ಆಟೋಟಗಳ ಅಂಗವೂ ಉಂಟು. ದೊಡ್ಡವರು-ಚಿಕ್ಕವರು ಅಂತ ಇಲ್ಲ, ಮೇಲು-ಕೀಳಿಲ್ಲ. ಅಚ್ಯುತಣ್ಣನಂಥ ಹಿರಿಯರೂ 'ಕಣ್ಣು ಕಟ್ಟಿ ಮಡಕೆ ಒಡೆಯುವ' ಸ್ಪರ್ಧೆಯಲ್ಲಿ ಒಂದು ಬಹುಮಾನ ಹೊಡೆದು ಸಹೋದ್ಯೋಗಿಗಳ ಎದೆಯಲ್ಲಿ ಮುದ ತುಂಬುತ್ತಾರೆ.

ಇಲ್ಲಿ ಎಲ್ಲಾ ಜಾತಿಗಳವರಿದ್ದಾರೆ, ಎಲ್ಲಾ ಧರ್ಮಗಳವರಿದ್ದಾರೆ. ಆದರೆ, ಕೋಮು-ಧರ್ಮಗಳ ಹೆಸರಿನ ಯಾವ ಸಣ್ಣತನವೂ ಇಲ್ಲಿ ತಲೆ ಹಾಕುವುದಿಲ್ಲ. ಇದು ಅವರೆಲ್ಲರ ಹಬ್ಬ—ಅವರ ಕೈಗೆ ಕೆಲಸ ಕೊಟ್ಟು, ಅವರನ್ನು ಸಾಕುತ್ತಿರುವ ಸಾಧನಗಳನ್ನು ಪೂ ಜಿಸಿ-ಗೌರವಿಸುವ 'ದುಡಿವವರ ಹಬ್ಬ'

ಅನಾಗರಿಕ ?

ಮೈ ಮುರಿದು ದುಡಿವ ಜನರನ್ನು ಕೀಳೆ ದು ಪರಿಗಣಿಸುವ ಸಮಾಜ, ಅವರ ಅಭಿ ರುಚಿ, ನಡತೆಗಳನ್ನೂ ಸಹ ಕೀಳೆಂದು, ನಾಗರಿಕವೆಂದು, ಅನುಮಾನಾಸ್ಪದವೆಂದ ನಂಬಿಕೊಂಡಿದೆ. ಆದರೆ, ಇಲ್ಲಿ ಬಂದರೆ ನಮ್ಮ ಆ ನಂಬಿಕೆ ಚೂರಾಗುತ್ತದೆ. ಕಿಕ್ಕಿರಿ ಸಭಾಂಗಣದಲ್ಲಿ ಹರಯದ ಹುಡುಗರೊಡ ಹೆಣ್ಣು ಮಕ್ಕಳೂ ನಿಸ್ಸಂಕೋಚವಾಗಿ ಕಾ ರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳು ತ್ತಾರೆ. ಮಧ್ಯೆ ಗಂಟೆಗಟ್ಟಲೆ ಕರೆಂಟ ಹೋಗಿ ಕಗ್ಗತ್ತಲು ಆವರಿಸಿದರೂ ಒಂದ ಸಣ್ಣ ಅಹಿತಕರ ಘಟನೆಯೂ ನಡೆಯುವ ದಿಲ್ಲವೆಂದರೆ—ಈ ವಾತಾವರಣದ ಸಭ್ಯತೆ ನಾಗರೀಕತೆ ನಮ್ಮನ್ನು ಅಣಕಿಸಬೇಕು, ನಮ್ಮ ಪೊಳ್ಳು ನಂಬಿಕೆಗಳನ್ನು ಚುಚ್ಚಬೇಕ

ಲೋಪದೋಷಗಳನ್ನು ತಿದ್ದಿಕೊಂಡ ಇವರ ಕಲೆ-ಸಾಧನೆ ನೂರ್ಮಡಿಯಾಗಲಿ ಕೊಪ್ಪದ ಸಾಂಸ್ಕೃತಿಕ ಜಡತೆ ತೊಲಗಿ ಲವಲವಿಕೆ ಹರಡಲಿ. ಅವರ ಈ ಭಾವೈಕ್ಯ ಎಂದೂ ಒಡೆಯದಿರಲಿ— ಎಂದು ಹಾರೈಸ ತ್ತೇನೆ.

—ಒಬ್ಬ ಕಲಾಭಿಮಾನಿ, ಕೊಪ್ಪ.

ರಕ್ತದಾನ ಎಲ್ಲಕ್ಕಿಂತ ಶ್ರೇಷ್ಠ ದಾ
ರಕ್ತ ದಾನ ಮಾಡಿ,
ಮಹಾದಾನಿಗಳೆನಿಸಿಕೊಳ್ಳಿ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ. ಶೃಂಗೇರಿ ಪ್ರತಿನಿಧಿ: ಕಲ್ಕುಳಿ ವಿಠಲ ಹೆಗ್ಡೆ